# ಹಂಪಿ ಟೈಮ್ಸ್

**HAMPI TIMES**

ಕನ್ನಡ ದಿನಪತ್ರಿಕೆ
KANNADA DAILY



ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038






ಸಂಪುಟ:02 • ಸಂಚಿಕೆ: 71 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 11.09.2024 • ಬುಧವಾರ • ಪುಟ:04 • ಬೆಲೆ:2
Volume:02 • Issue: 71 • PRGI No:KARKAN/2023/88055 • VIJAYANAGARA • 11.09.2024 • Wednesday • Page:04 • Rs:2



ಮನಸ್ಸು ಮಾಡು
ಕರ್ತವ್ಯ ನಿಷ್ಠನಾಗು
ಕಾದು ನೋಡು
ಪುಟ: 4ರಲ್ಲಿ ನೋಡಿ

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...
HAMPI TIMES VIJAYANAGARA
ಹಂಪಿ ಟೈಮ್ಸ್ ಇ-ಪೇಪರ್
94486 33038 | www.hampitimes.com / epaper.hampitimes.com | Vijayanagara | hampitimes@gmail.com


## ಮೈಕ್ರೋ ನ್ಯೂಸ್

### ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನ: ಕಾನೂನು ಅರಿವು ನೆರವು ಕಾರ್ಯಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ**
ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹೊಸಪೇಟೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಪೊಲೀಸ್ ಇಲಾಖೆ ಮತ್ತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಸೆಪ್ಟಂಬರ್ 11 ರಂದು ಬೆಳಿಗ್ಗೆ 9.30ಕ್ಕೆ ಹೊಸಪೇಟೆಯ ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆಯ ಕಾನೂನು ಅರಿವು ನೆರವು ಕಾರ್ಯಕ್ರಮ ನಡೆಯಲಿದೆ. >>2

### ಸೆಪ್ಟೆಂಬರ್ 11 ರಿಂದ ಲೋಕಾಯುಕ್ತ ಜನ ಸಂಪರ್ಕ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**
ಕರ್ನಾಟಕ ಲೋಕಾಯುಕ್ತ ಹೊಸಪೇಟೆ ಘಟಕದಿಂದ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಹಾಗೂ ಪೊಲೀಸ್ ನಿರೀಕ್ಷಕರ ನೇತೃತ್ವದಲ್ಲಿ ಸೆಪ್ಟೆಂಬರ್ 11 ರಿಂದ ಜಿಲ್ಲೆಯ ವಿವಿಧೆಡೆ ಲೋಕಾಯುಕ್ತ ಜನ ಸಂಪರ್ಕ ಸಭೆಗಳು ನಡೆಯಲಿವೆ.

ಸೆಪ್ಟೆಂಬರ 11 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಹೂವಿನಹಡಗಲಿ ತಾಲೂಕು ಕಚೇರಿ ಸಭಾಂಗಣದಲ್ಲಿ, ಸೆಪ್ಟೆಂಬರ 18 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಹಗರಿಬೊಮ್ಮನಹಳ್ಳಿ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ, ಸೆಪ್ಟೆಂಬರ 24 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಹೊಸಪೇಟೆ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಸಭೆಗಳು ನಡೆಯಲಿದ್ದು, ಸಾರ್ವಜನಿಕರು ತಮ್ಮ ಕುಂದುಕೊರತೆಗಳು, ಅಹವಾಲುಗಳು ಹಾಗೂ ತಮ್ಮ ಸರಕಾರಿ ಕೆಲಸಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಕಚೇರಿಗಳಲ್ಲಿ ಅನಗತ್ಯ ವಿಳಂಬತೆ, ಕಿರುಕುಳ, ತೊಂದರೆ ಮತ್ತು ಅಧಿಕಾರಿ ಸಿಬ್ಬಂದಿಯ ದುರಾಡಳಿತಕ್ಕೆ ಸಂಬಂಧಿಸಿದ ದೂರುಗಳನ್ನು ಸಂಬಂಧಿಸಿದ ತಾಲೂಕುಗಳಲ್ಲಿ ಆಯಾ ದಿನಾಂಕದಂದು ದ್ವಿಪ್ರತಿಯಲ್ಲಿ ದೂರ ಅರ್ಜಿಗಳನ್ನು ಸಲ್ಲಿಸಬಹುದು.

### ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
2024-25ನೇ ಸಾಲಿನಲ್ಲಿ ಹೊಸಪೇಟೆ ತಾಲೂಕಿನ ವಿವಿಧ ಶಾಲಾ, ಕಾಲೇಜುಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ಇಲಾಖೆಯ ವೆಬ್‌ಸೈಟ್ https://swdservices.karnataka.gov.in./prizemoneyclientApp/register ನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಮೆಟ್ರಿಕ್ ನಂತರದ ಪ್ರೋತ್ಸಾಹಧನಕ್ಕೆ ಮತ್ತು https://ssp.postmatric.karnataka.gov.in ನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಬಹುದು. ಶೇಕಡ 60 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಪ್ರೋತ್ಸಾಹಧನಕ್ಕೆ ಅನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ, ಹಾರ್ಡ್‌ಕಾಫಿ ಯೊಂದಿಗೆ ವಿದ್ಯಾಭ್ಯಾಸ ಮಾಡುತ್ತಿರುವ ಕಾಲೇಜಿನ ಪ್ರಾಂಶುಪಾಲರ ಸಹಿಯನ್ನು ಮಾಡಿಸಿ, ಸಮಾಜ ಕಲ್ಯಾಣ ಇಲಾಖೆಯ ಕಾರ್ಯಾಲಯಕ್ಕೆ ಸಲ್ಲಿಸಬೇಕು.

# ಕೃಷಿಗೆ ಹೆಚ್ಚಿನ ಉತ್ತೇಜನ ನೀಡಿ

## ಸಂಸದ ಈ ತುಕಾರಾಮ್ ಸಲಹೆ | ಕೃಷಿ ಕ್ಷೇತ್ರದ ಆಮೂಲಾಗ್ರ ಬದಲಾವಣೆಗೆ ಮಾಸ್ಟರ್ ಪ್ಲಾನ್ ಮಾಡಿ ಪ್ರಗತಿ ಪರಿಶೀಲನಾ ಸಭೆ | ರೈತರಿಗೆ ಏಳಿಗೆಗಾಗಿ ಹೊಸದೊಂದು ಮಾರ್ಗದರ್ಶಿ ಯೋಜನೆ ರೂಪಿಸಿ



**ಹಂಪಿ ಟೈಮ್ಸ್ ಹೊಸಪೇಟೆ**
ವಿಜಯನಗರ ಜಿಲೆಯ ಹೊಸಪೇಟೆ, ಕೂಡ್ಲಿಗಿ, ಕೊಟ್ಟೂರ, ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ ಮತ್ತು ಹರಪನಹಳ್ಳಿ ತಾಲೂಕುಗಳಲ್ಲಿ ನುರಿತ ಕೃಷಿತಜ್ಞರ ತಂಡದಿಂದ ಸಮೀಕ್ಷೆ ನಡೆದು, ತಜ್ಞರ ಮಾರ್ಗದರ್ಶನದಂತೆ ಜಿಲ್ಲೆಯ ಕೃಷಿಗೆ ಹೆಚ್ಚಿನ ಉತ್ತೇಜನ ನೀಡಲು ವಿಶೇಷ ಕ್ರಮ ವಹಿಸಬೇಕು ಎಂದು ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿಯ ಅಧ್ಯಕ್ಷರು ಆಗಿರುವ ಬಳ್ಳಾರಿ ಲೋಕಸಭಾ ಕ್ಷೇತ್ರದ ಸದಸ್ಯ ಈ ತುಕಾರಾಮ್ ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲಾಡಳಿತ ಭವನದಲ್ಲಿನ ಆಡಿಟೋರಿಯಂ ಹಾಲನಲ್ಲಿ ಮಂಗಳವಾರ ನಡೆದ ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳ 2024-25ನೇ ಸಾಲಿನ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಕೆಲ ಕಡೆಗಳಲ್ಲಿ ಕೆಲ ರೀತಿಯ ಬೆಳೆ ಬೆಳೆಯುತ್ತಾರೆ. ಒಟ್ಟಾರೆ ವೈಜ್ಞಾನಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಮಣ್ಣಿನ ಗುಣವನ್ನಾಧರಿಸಿ ರೈತರು ಬೆಳೆ ತೆಗೆಯಬೇಕು. ರೇಷ್ಮೆ, ಹುಣಸೆ, ದ್ರಾಕ್ಷಿ ಹೀಗೆ ಸರ್ವ ರೀತಿಯ ಬೆಳೆ ಬೆಳೆಯಲು ಒಂದು ಮಾಸ್ಟರ್ ಪ್ಲಾನ್ ಮಾಡಬೇಕು. ಜಿಲ್ಲೆಯ ಯಾವ ಯಾವ ತಾಲೂಕಿನಲ್ಲಿ ಯಾವ ರೀತಿಯ ಮಣ್ಣು ಇದೆ. ಯಾವ ಕಡೆಗೆ ಯಾವ ರೀತಿ ಬೆಳೆಯುತ್ತಾರೆ ಎಂಬುದರ ಬಗ್ಗೆ ಅಧ್ಯಯನ ನಡೆಸಿ ಸಮಗ್ರ ವರದಿ ನೀಡಬೇಕು.



### ಅಪೌಷ್ಠಿಕ ಮಕ್ಕಳ ಸಂಖ್ಯೆ ಜೀರೋ ಮಾಡಿ

ಸಮಾಜಕ್ಕೆ ಮಾರಕವಾಗಿ ಪರಿಣಮಿಸಿದ ಬಾಲ್ಯ ವಿವಾಹಗಳು ಜಿಲ್ಲೆಯಲ್ಲಿ ಎಲ್ಲೂ ಕೂಡ ನಡೆಯದಂತೆ ನೋಡಿಕೊಳ್ಳಬೇಕು. ಜಿಲ್ಲೆಯ ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಬೀದಿನಾಟಕಗಳನ್ನು ನಡೆಸುವ ಮೂಲಕ ಈ ಬಗ್ಗೆ ವ್ಯಾಪಕ ಅರಿವು ಮೂಡಿಸಬೇಕು. ಮಗುವೊಂದರ ಶೈಕ್ಷಣಿಕ ಬುನಾದಿಯಾದ ಅಂಗನವಾಡಿಗಳು ಸುಧಾರಣೆಯಾಗಬೇಕು. ಗುಣ ಮಟ್ಟದ ಆಹಾರ ಪೂರೈಕೆ ಮತ್ತು ಸಕಾಲಕ್ಕೆ ಚಿಕಿತ್ಸೆ ಕೊಡಿಸುವ ಮೂಲಕ ಜಿಲ್ಲೆಯಲ್ಲಿ ಅಪೌಷ್ಠಿಕತೆಯಿಂದ ಬಳಲುವ ಮಕ್ಕಳ ಸಂಖ್ಯೆಯನ್ನು ಶೂನ್ಯಕ್ಕಿಳಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ವಿಶೇಷ ಮುತುವರ್ಜಿ ವಹಿಸಿ ಕಾರ್ಯನಿರ್ವಹಿಸಬೇಕು ಎಂದು ಸಂಸದರು ನಿರ್ದೇಶನ ನೀಡಿದರು.

### ಡಿ.ಸಿ, ಸಿಇಓ, ಎಸ್ಪಿಗೆ ಸೂಚನೆ

ಬಾಲ್ಯ ವಿವಾಹ, ಅತ್ಯಾಚಾರ ಪ್ರಕರಣಗಳ ಚರ್ಚೆ ಬಂದಾಗ ಯಾರು ಸಹ ವಿಜಯನಗರ ಜಿಲ್ಲೆಯತ್ತ ಬೊಟ್ಟು ಮಾಡಬಾರದು. ಜಿಲ್ಲೆಯ ಹೆಸರು ಕೆಡಬಾರದು. ಅರಿವಿನ ಕೊರತೆಯಿಂದಾಗಿ ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳು ದಾರಿ ತಪ್ಪುತ್ತಿದ್ದಾರೆ. ಪ್ರೌಢಾವಸ್ಥೆಯಲ್ಲಿಯೇ ಬಾಲಕಿಯರು ಗರ್ಭಧರಿಸುತ್ತಿರುವುದಕ್ಕೆ ಕಡಿವಾಣ ಹಾಕಬೇಕು. ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಸಿಇಓ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಇದನ್ನು ಗಂಭೀರವಾಗಿ ಪರಿಗಣಿಸಿ ಜಿಲ್ಲೆಯಲ್ಲಿ ಪೋಕ್ಸೊ ಕಾಯಿದೆಯ ಸೇರಿದಂತೆ ನಾನಾ ವಿಷಯಗಳ ಬಗ್ಗೆ ಜನಜಾಗೃತಿ ಕಾರ್ಯಕ್ರಮಗಳನ್ನು ಯುದ್ಧೋಪಾದಿಯಲ್ಲಿ ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲು ತುರ್ತು ಕ್ರಮ ವಹಿಸಬೇಕು ಎಂದು ಸಂಸದರು ಸೂಚನೆ ನೀಡಿದರು.

ಶಾಸಕರೆಲ್ಲರೂ ಒಟ್ಟುಗೂಡಿ ಈ ಬಗ್ಗೆ ಸಮಗ್ರ ಚರ್ಚಿಸಿ, ಯಾವ ಮಣ್ಣಿನಲ್ಲಿ ಯಾವ ರೀತಿ ಬೆಳೆ ಬೆಳೆದರೆ ಹೆಚ್ಚು ಲಾಭವಾಗುತ್ತದೆ ಎಂಬುದರ ಬಗ್ಗೆ ಜಿಲ್ಲೆಯ ರೈತರಿಗೆ ಹೊಸದೊಂದು ಮಾರ್ಗದರ್ಶಿ ಯೋಜನೆ ರೂಪಿಸೋಣ ಎಂದು ಸಂಸದರು ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.


ಈ ಭೂಮಿ ಮೇಲಿನ ಮಾನವ ಕುಲ ಸೇರಿದಂತೆ ಕೋಟ್ಯಂತರ ಜೀವರಾಶಿಗೆ ನಿತ್ಯ ಅನ್ನ ನೀಡುವ ರೈತರ ಋಣ ತೀರಿಸುವ ಕಾರ್ಯವಾಗಬೇಕು. ಜಿಲ್ಲೆಯ ರೈತರ ಬಾಳು ಬಂಗಾರವಾಗಬೇಕು. ಕೃಷಿ, ರೈತರ ವಿಷಯಗಳಿಗೆ ಅಧಿಕಾರಿಗಳು ಹೆಚ್ಚಿನ ಮುತುವರ್ಜಿ ವಹಿಸಬೇಕು. ಪಶು ಸಂಗೋಪನೆ ಇಲಾಖೆ, ಮೀನುಗಾರಿಕೆ ಇಲಾಖೆಗಳು ಕೃಷಿಗೆ ಪೂರಕವಾಗಿ ಕಾರ್ಯನಿರ್ವಹಿಸಬೇಕು ಎಂದು ಸಂಸದರು ಸಲಹೆ ಮಾಡಿದರು.

ತಾಲೂಕುವಾರು ಜನಸಂಖ್ಯೆ ವಿವರ, ತಾಲೂಕುವಾರು ಆಸ್ಪತ್ರೆಗಳ ವಿವರದೊಂದಿಗೆ ಸಭೆಗೆ ಆಗಮಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದ ಸಂಸದರು, ಆಯಾ ಪ್ರಾಥಮಿಕ, ಸಮುದಾಯ ಆರೋಗ್ಯ ಕೇಂದ್ರಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು, ಅಂಬುಲೆನ್ಸ್, ಸ್ಕ್ಯಾನಿಂಗ್ ಯಂತ್ರ ಸೇರಿದಂತೆ ಯಾವುದೇ ವೈದ್ಯಕೀಯ ಸೌಕರ್ಯಗಳು ಬೇಕಿದ್ದರೆ ತಾಲೂಕವಾರು ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸಲು ಸಂಸದರು ಸೂಚನೆ ನೀಡಿದರು. >>3

# ಉಚಿತ ಆರೋಗ್ಯ ತಪಾಸಣಾ ಶಿಬಿರ

## ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಉಪಮುಖ್ಯವೈದ್ಯಾಧಿಕಾರಿ ಡಾ.ಪಿ.ಮುನಿವಾಸುದೇವರೆಡ್ಡಿ ಮಾಹಿತಿ | ಸೆ.12 ರಂದು ಶಿಬಿರ

**ಹಂಪಿ ಟೈಮ್ಸ್ ಹೊಸಪೇಟೆ**
ನಗರದ ರೋಟರಿ ಕ್ಲಬ್‌ನಲ್ಲಿ ಸೆ.12 ರಂದು ಬೆಳಿಗ್ಗೆ 10 ರಿಂದ ಸಂಜೆ 4.30ರವರೆಗೆ ತಜ್ಞವೈದ್ಯರಿಂದ ಉಚಿತವಾಗಿ ಎನ್‌ಸಿಡಿ ಅಸಂಕ್ರಾಮಿಕ ರೋಗಗಳು, ಮಧುಮೇಹಾ, ರಕ್ತದ ಒತ್ತಡ, ಪಾರ್ಶ್ವವಾಯು ಮತ್ತು ಆರೋಗ್ಯ ತಪಾಸಣೆ, ಔಷಧಿ ವಿತರಣೆ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ನಗರದ ಸರ್ಕಾರಿ ಆಯುರ್ವೇದ




ಆಸ್ಪತ್ರೆಯ ಉಪಮುಖ್ಯವೈದ್ಯಾಧಿಕಾರಿ ಡಾ.ಪಿ.ಮುನಿವಾಸುದೇವರೆಡ್ಡಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ, ಆಯುಷ್ ಇಲಾಖೆ ಬೆಂಗಳೂರು, ಜಿಲ್ಲಾಡಳಿತ, ಜಿ.ಪಂ ಹಾಗೂ ವಿಜಯನಗರ ಜಿಲ್ಲಾ ಆಯುಷ್ ಇಲಾಖೆ, ಸರ್ಕಾರಿ ಆಯುರ್ವೇದ ಆಸ್ಪತ್ರೆ ಮತ್ತು ರೋಟರಿ ಕ್ಲಬ್, ಇನ್ನರ್‌ವ್ಹೀಲ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ನಡೆಯಲಿದೆ. ಸಾರ್ವಜನಿಕರು ಶಿಬಿರದ ಪ್ರಯೋಜನ ಪಡೆದುಕೊಳ್ಳಬೇಕೆಂದು ವೈದ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೊಸಪೇಟೆ ಮಾರ್ಗವಾಗಿ ಭುವನೇಶ್ವರಗೆ ರೈಲು ವಾರಕ್ಕೊಮ್ಮೆ ಸೆ.9 ರಿಂದ ಡಿ.2, 2024 ರವರೆಗೆ ಸಂಚಾರ

**ಹಂಪಿ ಟೈಮ್ಸ್ ಹೊಸಪೇಟೆ**
ದಸರಾ - ದೀಪಾವಳಿ ಹಬ್ಬದ ಪ್ರಯುಕ್ತ ಓರಿಸ್ಸಾ ರಾಜಧಾನಿ ಭುವನೇಶ್ವರ ಮತ್ತು ಬೆಳಗಾವಿ ನಡುವೆ ಹೊಸಪೇಟೆ ಮಾರ್ಗವಾಗಿ ವಾರಕ್ಕೊಮ್ಮೆ ವಿಶೇಷ ರೈಲು ಆರಂಭಿಸಲಾಗಿದೆ.

ರೈಲು ಸಂಖ್ಯೆ 02813 ಪ್ರತಿ ಶನಿವಾರ ಭುವನೇಶ್ವರದಿಂದ ಸಂಜೆ: 7:15ಕ್ಕೆ ತೆರಳಿ ದುವ್ವಾಡ (ವಿಶಾಖಪಟ್ಟಣ), ರಾಜಮಂಡ್ರಿ, ವಿಜಯವಾಡ, ಡೋನ್, ಗುಂಟಕಲ್, ಬಳ್ಳಾರಿ ಮಾರ್ಗವಾಗಿ ಭಾನುವಾರ ರಾತ್ರಿ:7:50ಕ್ಕೆ ಹೊಸಪೇಟೆಗೆ ಆಗಮಿಸಿ ಗದಗ, ಹುಬ್ಬಳ್ಳಿ, ಧಾರವಾಡ ಮಾರ್ಗವಾಗಿ ಬೆಳಗಾವಿಗೆ ಸೋಮವಾರ ಮುಂಜಾನೆ 3:00 ಗಂಟೆಗೆ ತಲುಪುತ್ತದೆ. ಹಾಗೂ ರೈಲು ಸಂಖ್ಯೆ:02814 ಪ್ರತೀ ಸೋಮವಾರ ಬೆಳಿಗ್ಗೆ 7:30ಕ್ಕೆ ಬೆಳಗಾವಿಯಿಂದ ನಿರ್ಗಮಿಸಿ ಅದೇ ಮಾರ್ಗವಾಗಿ ಮಧ್ಯಾಹ್ನ 12:30ಕ್ಕೆ ಹೊಸಪೇಟೆ ಆಗಮಿಸಿ ಬಳ್ಳಾರಿ, ಗುಂತಕಲ್ ಮಾರ್ಗವಾಗಿ ಮಂಗಳವಾರ ಮಧ್ಯಾಹ್ನ:2:30ಕ್ಕೆ ಭುವನೇಶ್ವರ ತಲುಪುತ್ತದೆ. ಈ ರೈಲು ಸಂಚಾರದಿಂದ ಭುವನೇಶ್ವರಕ್ಕೆ ಹತ್ತಿರದಲ್ಲೆ ಇರುವ ವಿಶ್ವಪಾರಂಪರಿಕ ತಾಣವಾದ ಕೋನಾರ್ಕ ಸೂರ್ಯದೇವಾಲಯ, ಹಾಗೂ ಪ್ರಸಿದ್ಧ ಪುರಿ ಜಗನ್ನಾಥ ಧಾರ್ಮಿಕ ಕ್ಷೇತ್ರ (ಬಂದರು ನಗರ)ಕ್ಕೆ ನೇರ ಸಂಪರ್ಕ ದೊರೆಯುತ್ತದೆ.ಎಂದು ರೈಲ್ವೆ ಇಲಾಖೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ ಎಂದು ವಿಜಯನಗರ ರೈಲ್ವ ಕ್ರಿಯಾ ಸಮಿತಿ ಕಾರ್ಯದರ್ಶಿ ಮಹೇಶ ಕುಡುತಿನಿ ಮತ್ತು ಜೆ.ಉಮಾಮಹೇಶ್ವರ ತಿಳಿಸಿದ್ದಾರೆ.




ಹಂಪಿ ಟೈಮ್ಸ್ HAMPI TIMES

# ಬೆಂಬಲ ಬೆಲೆಯಲ್ಲಿ ಸೂರ್ಯಕಾಂತಿ ಉತ್ಪನ್ನ ಖರೀದಿ ಪ್ರಕ್ರಿಯೆ ಆರಂಭ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯಲ್ಲಿ ಬೆಂಬಲ ಬೆಲೆ ಯೋಜನೆಯಡಿ 2024-25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಸೂರ್ಯಕಾಂತಿ ಉತ್ಪನ್ನವನ್ನು ಖರೀದಿಸುವ ಪ್ರಕ್ರಿಯೆ ನಡೆಯುತ್ತಿದೆ. ಎಫ್.ಎ.ಕ್ಯೂ ಗುಣಮಟ್ಟದ ಸೂರ್ಯಕಾಂತಿ ಉತ್ಪನ್ನವನ್ನು ಕೇಂದ್ರ ಸರ್ಕಾರ ನಿಗದಿಪಡಿಸಿದ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್ 7280 ರೂ. ದಂತೆ ರೈತರಿಂದ ಖರೀದಿಗಾಗಿ ಖರೀದಿ ಕೇಂದ್ರಗಳನ್ನು ಜಿಲ್ಲೆಯ ವಿವಿಧೆಡೆ ಪ್ರಾರಂಭಿಸಲಾಗಿದ್ದು, ಜಿಲ್ಲೆಯ ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ತಿಳಿಸಿದ್ದಾರೆ.

ಬೆಂಬಲ ಬೆಲೆ ಯೋಜನೆಯಡಿ 2024-25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಸರ್ಕಾರದ ಆದೇಶದಲ್ಲಿನ ಮಾರ್ಗಸೂಚನೆಯಂತೆ, ವಿಜಯನಗರ ಜಿಲ್ಲೆಯಲ್ಲಿ ರಾಜ್ಯ ಸರ್ಕಾರದಿಂದ ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾ ಮಂಡಳಿ ನಿಯಮಿತ ಚಿತ್ರದುರ್ಗ, ವಿಭಾಗೀಯ ಕಚೇರಿ, ವಿಜಯನಗರ ಇವರಿಂದ ಎಫ್.ಎ.ಕ್ಯೂ ಗುಣಮಟ್ಟದ ಸೂರ್ಯಕಾಂತಿ ಉತ್ಪನ್ನವನ್ನು ಖರೀದಿಸಲಾಗುತ್ತಿದೆ.

ಕೂಡಲೇ ಹೆಸರು ನೋಂದಾಯಿಸಿ:ಒಣಗಿದ ಹಾಗೂ ಸ್ವಚ್ಛ ಎಫ್.ಎ.ಕ್ಯೂ ಗುಣಮಟ್ಟದ ಸೂರ್ಯಕಾಂತಿ ಉತ್ಪನ್ನವನ್ನು ಕೇಂದ್ರಕ್ಕೆ ಮಾರಾಟಕ್ಕೆ ತರಬೇಕು. ಸೂರ್ಯಕಾಂತಿ ಖರೀದಿ ಕೇಂದ್ರಗಳಲ್ಲಿ ರೈತರು ತಮ್ಮ ಹೆಸರನ್ನು 24-08-2024ರಿಂದ ಅನ್ವಯವಾಗುವಂತೆ 45 ದಿನಗಳೊಳಗೆ ನೋಂದಣಿ ಮಾಡಿಸಬೇಕು. ನೋಂದಣಿ ಚೀಟಿ ಪಡೆಯಬೇಕು. ನಿಗದಿತ ಅವಧಿಯೊಳಗೆ ನೋಂದಣಿಗೊಂಡ ರೈತರಿಂದ ಪ್ರತಿ ಎಕರೆಗೆ 03 (ಮೂರು) ಕ್ವಿಂಟಾಲ್ ಗರಿಷ್ಠ 15 (ಹದಿನೈದು) ಕ್ವಿಂಟಾಲ್ ಮಾತ್ರ ಖರೀದಿಸಲಾಗುವುದು. ಸೂರ್ಯಕಾಂತಿ ಉತ್ಪನ್ನವನ್ನು 24-08-2024 ರಿಂದ ಅನ್ವಯವಾಗುವಂತೆ 90 ದಿನಗಳವರೆಗೆ ಬೆಳಿಗ್ಗೆ 09 ಗಂಟೆಯಿಂದ ಸಂಜೆ 05 ಗಂಟೆವರೆಗೆ ಮಾತ್ರ ಖರೀದಿಸಲಾಗುವುದು. ಸರ್ಕಾರಿ ರಜೆ ದಿನಗಳನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಖರೀದಿಸಲಾಗುವುದು.

**ಮಧ್ಯವರ್ತಿಗಳ ಮೊರೆ ಹೋಗಬಾರದು:** ವಿಜಯನಗರ ಜಿಲ್ಲೆಯ ರೈತರು ಬೆಂಬಲ ಬೆಲೆ ಯೋಜನೆಯ ಸದುಪಯೋಗಪಡಿಸಿಕೊಳ್ಳಬೇಕು. ಯಾವುದೇ ಸಂದರ್ಭದಲ್ಲಿ ರೈತರು ಮಧ್ಯವರ್ತಿಗಳ ಮೊರೆ ಹೋಗಬಾರದು. ಖರೀದಿ ಕೇಂದ್ರದಲ್ಲಿ ನಿಗದಿತ ಸಾಮಾಜಿಕ ಅಂತರ ಮತ್ತು ನೈರ್ಮಲ್ಯ ಕಾಪಾಡುವುದು ಹಾಗೂ ವೈರಾಣು ಹರಡುವಿಕೆ ತಡೆಗಟ್ಟುವ ಬಗ್ಗೆ ಕೇಂದ್ರ/ರಾಜ್ಯ ಸರ್ಕಾರವು ನೀಡಿರುವ ಸೂಚನೆಯನ್ನು ಕಡ್ಡಾಯವಾಗಿ ಪಾಲಿಸಿ.

**ಬೇಕಾಗುವ ದಾಖಲಾತಿಗಳು:** ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ಸೂರ್ಯಕಾಂತಿ ಖರೀದಿಗೆ ಕೆಲವು ದಾಖಲೆಗಳ ಅಗತ್ಯವಿರುತ್ತದೆ. 2024-25ನೇ ಸಾಲಿನ ಪಹಣಿ ಪತ್ರ., ರೈತರು ತಮ್ಮ ಹೆಸರನ್ನು ಫ್ರೂಟ್ಸ್ (FRUITS) ತಂತ್ರಾಂಶದಲ್ಲಿ ನೋಂದಾಯಿಸಿರಬೇಕು ಹಾಗೂ ಎಫ್ಐಡಿ( FID) ಯನ್ನು ಪಡೆಯುವುದು ಕಡ್ಡಾಯ., ರೈತರಲ್ಲಿ ಫ್ರೂಟ್ಸ್ ಐಡಿ (FRUITS ID) ಇಲ್ಲದೇ ಇದ್ದಲ್ಲಿ ಅಥವಾ ಫ್ರೂಟ್ಸ್ (FRUITS) ನಲ್ಲಿ ಯಾವುದಾದರು ತಾಂತ್ರಿಕ ದೋಷವಿದ್ದಲ್ಲಿ ರೈತರು ಕೃಷಿ ಇಲಾಖೆಯನ್ನು ಸಂಪರ್ಕಿಸಿ ಅವಶ್ಯಕ ಮಾಹಿತಿಯನ್ನು ಪಡೆಯಬೇಕು. ಆಧಾರ್ ಕಾರ್ಡ್ ನೀಡಬೇಕು., ಬ್ಯಾಂಕ್ ಖಾತೆ (ಆಧಾರದ ಕಾರ್ಡ್ ನೊಂದಿಗೆ ಜೋಡಣೆಗೊಂಡ) ಪುಸ್ತಕದ ನಕಲು ಪ್ರತಿ ನೀಡಬೇಕು.

**ಖರೀದಿ ಕೇಂದ್ರದ ವಿಳಾಸ, ಏಜನ್ಸಿ ವಿವರ:** ಎಣ್ಣೇ ಬೀಜ ಬೆಳೆಗಾರರ ಸಹಕಾರ ಸಂಘ ನಿಯಮಿತ, ಇಟಗಿ ಗ್ರಾಮ, ತಾ. ಹೂವಿನಹಡಗಲಿ ಕಾರ್ಯ ದರ್ಶಿ:ಚಂದ್ರಪ್ಪ-9902812417., ಎಣ್ಣೇ ಬೀಜ ಬೆಳೆಗಾರರ ಸಹಕಾರ ಸಂಘ ನಿಯಮಿತ, ನಂದಿಬೇವೂರು ಗ್ರಾಮ ತಾ.ಹರಪನಹಳ್ಳಿ, ಕಾರ್ಯದರ್ಶಿ: ಸುರೇಶ - 9902128437., ಎಣ್ಣೇ ಬೀಜ ಬೆಳೆಗಾರರ ಸಹಕಾರ ಸಂಘ ನಿಯಮಿತ, ನಂದಿಬೇವೂರು ಗ್ರಾಮ ತಾ. ಹರಪನಹಳ್ಳಿ, ಕಾರ್ಯದರ್ಶಿ: ಸುರೇಶ- 9902128437., ಎಣ್ಣೇ ಬೀಜ ಬೆಳೆಗಾರರ ಸಹಕಾರ ಸಂಘ ನಿಯಮಿತ, ಉಪನಾಯಕನಹಳ್ಳಿ ತಾ.ಹಗರಿಬೊಮ್ಮನಹಳ್ಳಿ, ಕಾರ್ಯದರ್ಶಿ: ಕೃಷ್ಣಪ್ಪ-7899891663., ಎಣ್ಣೇ ಬೀಜ ಬೆಳೆಗಾರರ ಸಹಕಾರ ಸಂಘ ನಿಯಮಿತ, ಹುರುಳಿ ಹಾಳ ಗ್ರಾಮ ತಾ.ಕೂಡ್ಲಿಗಿ ಕಾರ್ಯದರ್ಶಿ ಅಜ್ಜಪ್ಪ-9880421083., ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾ ಮಂಡಳಿ ನಿಯಮಿತ ವಿಭಾಗೀಯ ಕಚೇರಿ, ವಿಜಯನಗರ ಅಯ್ಯಪ್ಪ ಡಂಬಾಳ 8073797774.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**- ಜಾಹೀರಾತು ವ್ಯವಸ್ಥಾಪಕರು.**

# ಸಿರಗುಪ್ಪ ಮೂಲದ ನಂದಿನಿ ಅಗಸರ ಏಷ್ಯನ್ ಗೇಮ್ಸ್ ನಲ್ಲಿ ಕಂಚನ್ನು ಗೆದ್ದ ಕತೆ



ಚೀನಾದ ಹ್ಯಾಂಗ್‌ಝೌನಲ್ಲಿ 2023 ರ ಸೆಪ್ಟಂಬರ್ 23 ರಿಂದ ಅಕ್ಟೋಬರ್ 8 ರ ತನಕ 2022 ರ 19 ನೇ ಏಷ್ಯನ್ ಗೇಮ್ಸ್ ನಡೆದವು. ಭಾರತಕ್ಕೆ 28 ಚಿನ್ನ, 38 ಬೆಳ್ಳಿ 41 ಕಂಚು ಒಳಗೊಂಡಂತೆ 107 ಪದಕಗಳನ್ನು ಪಡೆದು ಭಾಗವಹಿಸಿದ ರಾಷ್ಟ್ರಗಳಲ್ಲಿ ಭಾರತ ನಾಲ್ಕನೆ ಸ್ಥಾನ ಪಡೆಯಿತು. ಅಥ್ಲೆಟಿಕ್ಸ್ ನ ಹೆಪ್ಟಾಥ್ಲಾನ್ ವಿಭಾಗದಲ್ಲಿ ತೆಲಂಗಾಣದ ನಂದಿನಿ ಅಗಸರ ಕಂಚಿನ ಪದಕ ಎತ್ತಿ ಹಿಡಿದಳು. ಆಗ ಇಂಡಿಯಾದ ಮೀಡಿಯಾದಲ್ಲಿ ನಂದಿನಿ ಅಗಸರ ಎನ್ನುವ ಹೆಸರು ದೊಡ್ಡದಾಗಿ ಕೇಳಿ ಬಂತು. ಆಗ ಹೈದರಾಬಾದಿನಲ್ಲಿ ರಸ್ತೆ ಪಕ್ಕ ಟೀ ಶಾಪ್ ನಡೆಸುವ ಯಲ್ಲಪ್ಪನ ಮಗಳು ನಂದಿನಿ ಎನ್ನುವುದು ಮುನ್ನಲೆಗೆ ಬರುತ್ತದೆ. ಟಿವಿ ಪತ್ರಿಕೆಗಳಲ್ಲಿ ಸಂದರ್ಶನ ಬರುತ್ತದೆ. ಇಂತಹ ನಂದಿನಿಯ ಮನೆಮಾತು ಕನ್ನಡ.

ಅರೆ ನಂದಿನಿಗೂ ಕನ್ನಡಕ್ಕೂ ಎಲ್ಲಿಯ ಸಂಬಧ ಎಂದು ಹುಡುಕಾಟ ನಡೆಸಿದಾಗ, ಸಿರುಗುಪ್ಪ ತಾಲೂಕಿನ ಶ್ರೀನಗರ ಕ್ಯಾಂಪಿನ ಅಗಸರ ಯಲ್ಲಪ್ಪ ಮತ್ತು ಐಯಮ್ಮ ದಂಪತಿಗಳಿಗೆ 2003 ಆಗಷ್ಟ್ 7 ರಂದು ಒಂದು ಹೆಣ್ಣು ಮಗು ಹುಟ್ಟುತ್ತದೆ. ಹೊಟ್ಟೆಪಾಡಿಗಾಗಿ ಮೂರು ತಿಂಗಳ ಹೆಣ್ಣು ಮಗುವನ್ನು ಎತ್ತಿಕೊಂಡು ಹೈದರಾಬಾದಿಗೆ ವಲಸೆ ಹೋಗುತ್ತಾರೆ. ಆ ಹೆಣ್ಣು ಮಗುವೆ ಇಂದು ಚೀನಾದಲ್ಲಿ ನಡೆದ ಏಷ್ಯನ್ ಗೇಮ್ಸ್ ನಲ್ಲಿ ಕಂಚಿನ ಪದಕ ಪಡೆದ ನಂದಿನಿ ಅಗಸರ.



**ಅರುಣ್ ಜೋಳದ ಕೂಡ್ಲಿಗಿ**

Scan For Digital Colourful
HAMPI TIMES E-paper

ನಂದಿನಿಯ ಸಿರಗುಪ್ಪ ಮೂಲದ ಬಗ್ಗೆ ತಂದೆ ಯಲ್ಲಪ್ಪನನ್ನು ಕೇಳಿದರೆ ಕಣ್ಣಿಗೆ ಕಟ್ಟುವಂತೆ ಬದುಕಿನ ತಿರುವುಗಳ ಕಥೆಯನ್ನು ಬಿಚ್ಚಿಡುತ್ತಾರೆ. ಸಿರುಗುಪ್ಪದಿಂದ 15 ಕಿ.ಮೀ ದೂರದಲ್ಲಿ ಶ್ರೀಮನ್ನಾರಾಯಣ ಕ್ಯಾಂಪ್ ಎನ್ನುವ ಮೂವತ್ತು ಮನೆಗಳ ಪುಟ್ಟ ಕ್ಯಾಂಪ್ ಇತ್ತು. ಇದು ಹೈದರಾಬಾದ್ ಮತ್ತು ವಿಜಯವಾಡದಿಂದ ಬಂದ ಜಮೀನ್ದಾರರು ಈ ಭಾಗದಲ್ಲಿ ಐವತ್ತೋ ನೂರು ಎಕರೆ ಲೀಜ್ ಪಡೆದೋ, ಕೊಂಡುಕೊಂಡೋ ಕೃಷಿ ಮಾಡುತ್ತಿದ್ದಾರೆ. ರಾರಾವಿಯಲ್ಲಿ ಇಸ್ತ್ರಿ ಮಾಡಿಕೊಂಡಿದ್ದ ಈರಣ್ಣ ಮತ್ತು ಆತನ ಹೆಂಡತಿ ಶ್ರೀಮನ್ನಾರಾಯಣ ಕ್ಯಾಂಪ್‌ಗೆ ಬಂದು ಬಟ್ಟೆತೊಳೆದು ಇಸ್ತ್ರಿ ಮಾಡುತ್ತಾ ಬದುಕು ಕಟ್ಟಿಕೊಳ್ಳುತ್ತಾರೆ. ಒಬ್ಬರಿಗೆ ಎರಡು ಚೀಲದಂತೆ ನೆಲ್ಲು ಕೊಡುತ್ತಾರೆ. ಗುಡಿಸಲೊಂದರಲ್ಲಿ ಬದುಕು ಸವೆಸುತ್ತಾರೆ.

ಕಾಲಾನಂತರ ಐದು ಮಕ್ಕಳಾಗುತ್ತವೆ. ಮನೆ ಖರ್ಚು ಹೆಚ್ಚಾದಂತೆ ಜಮೀನ್ದಾರರಲ್ಲಿ ಒಂದು ಚೀಲ ಬತ್ತ ಹೆಚ್ಚು ಕೊಡಲು ಕೇಳುತ್ತಾರೆ. ಜಮೀನ್ದಾರರು ಇದಕ್ಕೆ ಸೊಪ್ಪು ಹಾಕುವುದಿಲ್ಲ. ಐದು ಜನ ಮಕ್ಕಳು ದೊಡ್ಡವರಾಗುತ್ತಾರೆ. ಇದೇ ಹೊತ್ತಿಗೆ ಈ ಕ್ಯಾಂಪಿಗೆ ಸ್ವಲ್ಪ ದೂರದಲ್ಲಿ ಶ್ರೀನಗರ ಕ್ಯಾಂಪಿನಲ್ಲಿ ಈರಣ್ಣನಿಗೆ ಜನತಾ ಮನೆ ಮುಂಜೂರಾಗುತ್ತದೆ. ಹಾಗಾಗಿ ಈತನ ಕುಟುಂಬ ಶ್ರೀನಗರ ಕ್ಯಾಂಪಿನಲ್ಲಿ ನೆಲೆಗೊಳ್ಳುತ್ತದೆ. ಮದುವೆ ವಯಸ್ಸಿಗೆ ಬಂದ ಮಗ ಯಲ್ಲಪ್ಪ ಮತ್ತು ಮತ್ತೊಬ್ಬ ಮಗಳನ್ನು ಮದುವೆ ಮಾಡುತ್ತಾರೆ. ಹೊಸ ಮನೆ ಕಟ್ಟಿಕೊಳ್ಳುತ್ತಾರೆ. ಪರಿಣಾಮ ಒಂದೂವರೆ ಲಕ್ಷ ಸಾಲವಾಗುತ್ತದೆ. ಈ ಸಾಲ ತೀರಿಸಲು ಯಲ್ಲಪ್ಪನ ದುಡಿಮೆ ಸಾಕಾಗುವುದಿಲ್ಲ. ಈ ಮಧ್ಯೆ ಚೊಚ್ಚಲ ಮಗಳು ಹುಟ್ಟುತ್ತಾಳೆ. ಸಾಲ ತೀರಿಸಲು ದುಡಿಯಲೆಂದು ಮೂರು ತಿಂಗಳ ಮಗುವನ್ನು ಎತ್ತಿಕೊಂಡು 2004 ರಲ್ಲಿ ಹೈದರಾಬಾದಿಗೆ ದುಡಿಯಲು ಹೋಗುತ್ತಾರೆ. ಆ ಮಗು ನಂದಿನಿ ಅಗಸರ.





ಹೈದರಾಬಾದಿನ ಕುಕ್ಕಟ್ಟಪಲ್ಲೆಯಲ್ಲಿಯ ಅಣ್ಣರ ಮನೆಯಲ್ಲಿ ಇಸ್ತ್ರಿ ಮಾಡುತ್ತಿದ್ದ ಯಲ್ಲಪ್ಪ ಮುಂದೆ ಬುಜ್ಜಮ್ಮ ಎನ್ನುವವರ ಸಹಾಯದಿಂದ ಹೈದರಾಬಾದಿನ ಹೈಟೆಕ್ ಸಿಟಿಯಲ್ಲಿ ಮನೆ ಮಾಡುತ್ತಾರೆ. ರಸ್ತೆಯಲ್ಲಿ ಒಂದು ಟೇಬಲ್ ಹಾಕಿಕೊಂಡು ಯಲ್ಲಪ್ಪ ಇಸ್ತ್ರಿ ಮಾಡಲು ನಿಲ್ಲುತ್ತಾರೆ. ಮೂರು ದಿನವಾದರೂ ಒಂದು ಜೊತೆ ಬಟ್ಟೆಯೂ ಬರುವುದಿಲ್ಲ. ಅಲ್ಲಿನ ಅಗಸರ ಯೂನಿಯನ್ ನವರು ಹೊಸಬರಿಗೆ ಅವಕಾಶ ಕೊಡುವಂತಿರಲಿಲ್ಲ. ಮುಂದೇನು ಎನ್ನುವ ಚಿಂತೆ ಶುರುವಾಯ್ತು. ಊಟಕ್ಕೂ ಕಷ್ಟವಾಯ್ತು. ವ'ಂಂದೆ ಕೌನ್ಸಲರ್ ವರಲಕ್ಷ್ಮಿ ಅವರ ಸಹಾಯದಿಂದ ಚಂದ್ರಪುರಿ ಕಾಲನಿಯಲ್ಲಿ ಯಲ್ಲಪ್ಪನಿಗೆ ವಾಚ್‌ಮನ್ ಕೆಲಸ ಸಿಗುತ್ತದೆ. ರಾತ್ರಿ ವಾಚಮನ್ ಕೆಲಸ ಮಾಡುತ್ತಾ ಹಗಲು ಇಸ್ತ್ರಿ ಮಾಡುವ ಕೆಲಸ ಶುರುಮಾಡುತ್ತಾರೆ. ವಾಸ ಹೈಟೆಕ್ ಸಿಟಿಯಿಂದ ಚಂದ್ರಾಪುರ ಕಾಲನಿಗೆ ಬದಲಾಗುತ್ತದೆ.

ಮುಂದೆ ಯಲ್ಲಪ್ಪ ಟೀಶಾಪ್ ತೆರೆಯುತ್ತಾರೆ. ನಂದಿನಿ ನಂತರ ಮತ್ತಿಬ್ಬರು ಗಂಡು ಮಕ್ಕಳಾಗುತ್ತವೆ. ಮಕ್ಕಳನ್ನು ಚೆನ್ನಾಗಿ ಓದಿಸಬೇಕು ಎನ್ನುವ ಕನಸು ಕಟ್ಟುತ್ತಾರೆ. ನಂದಿನಿಯನ್ನು ಚಂದ್ರಾಪುರ ಕಾಲನಿಯ ಕಾಪರದ (ಸೈನಿಕಪುರಿ) ವೀವಿಲ್ಲಿ ವಿಂಕಿ ಎನ್ನುವ ಸ್ಕೂಲಿಗೆ ಎಲ್.ಕೆ.ಜಿ ಸೇರಿಸುತ್ತಾರೆ. ಮುಂದೆ ವಿಜಯ ಸಾಯಿ ಸ್ಕೂಲಿನಲ್ಲಿ ಒಂದರಿಂದ ನಾಲ್ಕನೆ ತರಗತಿ ಓದುತ್ತಾಳೆ. ಎಡಕೈಯಲ್ಲಿ ಬರೆಯುವ ನಂದಿನಿ ಶಾಲೆಯಲ್ಲಿ ಎಲ್ಲದರಲ್ಲೂ ಮೊದಲಸ್ಥಾನ ಪಡೆವ ಜಾಣೆ.





ಮುಂದೆ ಕಮಲಮ್ಮ ಎನ್ನುವ ಟೀಚರ್ ಸಹಾಯದಿಂದ ಸೈನಿಕ ಕೇಂದ್ರೀಯ ವಿದ್ಯಾಲಯದಲ್ಲಿ ನಂದಿನಿಗೆ ಸೀಟು ಸಿಗುತ್ತದೆ. ಕೇಂದ್ರೀಯ ವಿದ್ಯಾಲಯದ ಪಿಟಿ ಟೀಚರ್ ಮುತ್ತಯ್ಯ ಎನ್ನುವವರು ನಂದಿನಿಯನ್ನು ಫುಟ್‌ಬಾಲ್‌ಗೆ ಸೇರಿಸಿಕೊಂಡು ತರಬೇತಿ ಕೊಡುತ್ತಾರೆ. ಫುಟ್ ಬಾಲ್ ಟೀಮಲ್ಲಿ ದೆಹಲಿ ತನಕ ಹೋಗುತ್ತಾಳೆ. ಒಮ್ಮೆ ಹೈದರಾಬಾದಿನ ಜಿಮ್ಖಾನ ಮೈದಾನದಲ್ಲಿ ಪುಟ್ಬಾಲ್ ಪಂದ್ಯದಲ್ಲಿ ನಂದಿನಿ ಎಷ್ಟೇ ಚನ್ನಾಗಿ ಆಡಿದರೂ ಪಂದ್ಯವನ್ನು ಗೆಲ್ಲಿಸಲಾಗುವುದಿಲ್ಲ. ಈ ಪಂದ್ಯ ವೀಕ್ಷಿಸಿದ ಯಲ್ಲಪ್ಪ ಮಗಳಿಗೆ ಇನ್ನುಮುಂದೆ ಒಬ್ಬಳೆ ಆಡುವ ಗೇಮ್‌ಗಳಲ್ಲಿ ಭಾಗವಹಿಸು ಎಂದು ಮಾರ್ಗದರ್ಶನ ಮಾಡುತ್ತಾರೆ. ಅಲ್ಲಿಂದ ನಂದಿನಿ ಅಥ್ಲೀಟ್ ಆಟಗಳಲ್ಲಿ ತೊಡಗುತ್ತಾಳೆ. ಗಚ್ಚಿಬೌಲಿ ಸ್ಟೇಡಿಯಂ ನಲ್ಲಿ ಹೈಜಂಪ್ ನಲ್ಲಿ ಗೆಲ್ಲುತ್ತಾಳೆ. ಅರ್ಜುನ್ ಪ್ರಶಸ್ತಿ ಪಡೆದ ನಾಗಪುರಿ ರಮೇಶ್ ಅವರ ಸಂಪರ್ಕ ಸಿಕ್ಕಮೇಲೆ ನಂದಿನಿಯ ಕ್ರೀಡಾ ಬದುಕಿನಲ್ಲಿ ಯಶಸ್ಸಿನ ಓಟ ಶುರುವಾಗುತ್ತದೆ.

ನಂದಿನಿ ಪೂರ್ಣ ಪ್ರಮಾಣದಲ್ಲಿ ಕೋಚಿಂಗ್‌ನಲ್ಲಿ ತೊಡಗಿಕೊಂಡಾಗ ಗೈರುಹಾಜರಿ ಸಮಸ್ಯೆಯಿಂದ ಕೇಂದ್ರೀಯ ವಿದ್ಯಾಲಯವನ್ನು ತೊರೆಯುತ್ತಾಳೆ. ಹತ್ತನೆ ತರಗತಿಗೆ ತೆಲಂಗಾಣ ಸರಕಾರದ ಸಮಾಜ ಕಲ್ಯಾಣ ಇಲಾಖೆಯ ಗೋಪ್ಲಿದೊಡ್ಡಿಯ 'ಗುರುಕುಲ' ಎನ್ನುವ ವಸತಿ ಶಾಲೆಯಲ್ಲಿ ಪ್ರವೇಶ ಪಡೆಯುತ್ತಾಳೆ. ಆರ್.ಎಸ್.ಪ್ರವೀಣ್ ಕುಮಾರ್ ಸಹಾಯ ಮಾಡುತ್ತಾರೆ. 'ಸ್ಪೋರ್ಟ್ಸ್ ಎನ್ನುವ ಪದವನ್ನೇ ತಿಳಿಯದ ಕುಟುಂಬದಿಂದ ಬಂದ ನಾನು, ಭೂಪಟದಲ್ಲಿ ಮಾತ್ರ ನೋಡಿದ ಚೈನಾ, ಅಮೇರಿಕಾ, ಕೀನ್ಯಾದಂತಹ ದೇಶಗಳಿಗೆ ವಿಮಾನದಲ್ಲಿ ಪ್ರಯಾಣಿಸಿ ಭಾರತವನ್ನು ಪ್ರತಿನಿಧಿಸುತ್ತೇನೆ ಎಂದರೆ ಬಹಳ ಹೆಮ್ಮೆ ಅನ್ನಿಸುತ್ತದೆ' ಎಂದು ನಂದಿನಿ ಯಶಸ್ಸಿನ ಹಾದಿಯನ್ನು ನೆನೆಯುತ್ತಾರೆ. ಇದೀಗ ಈನಾಡು ಲಕ್ಷ್ಯಂ ಸ್ಪೋರ್ಟ್ಸ್ ಸಂಸ್ಥೆಯು ನಂದಿನಿಯವರ ಜವಾಬ್ದಾರಿಯನ್ನು ತೆಗೆದುಕೊಂಡಿದೆ.

2022 ಆಗಸ್ಟ್ನಲ್ಲಿ, ವಿಶ್ವ ಅಥ್ಲೆಟಿಕ್ಸ್ ಗ20 ಚಾಂಪಿಯನ್‌ಶಿಪ್‌ನಲ್ಲಿ 100ಟ ಹರ್ಡಲ್ಸ್ನಲ್ಲಿ ಏಳನೇ ಸ್ಥಾನ ಪಡೆಯುತ್ತಾಳೆ. 2022 ರಲ್ಲಿ ಅಕ್ಟೋಬರ್‌ನಲ್ಲಿ, ಬೆಂಗಳೂರಿನ ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ನಡೆದ ರಾಷ್ಟ್ರೀಯ ಮುಕ್ತ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ 100 ಮೀಟರ್ ಹರ್ಡಲ್ಸ್ನಲ್ಲಿ ಬೆಳ್ಳಿ ಗೆಲ್ಲುತ್ತಾಳೆ. 2021 ರ ಜೂನ್‌ನಲ್ಲಿ, ಪಟಿಯಾಲದ ರಾಷ್ಟ್ರೀಯ ಅಂತರ-ರಾಜ್ಯ ಹಿರಿಯ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಪದಕ ಪಡೆಯುತ್ತಾಳೆ. ಹೀಗೆ ಶುರುವಾದ ನಂದಿನಿಯ ಗೆಲುವಿನ ಪಯಣದಲ್ಲಿ ಈತನಕ 24 ಬಂಗಾರ, 10 ಬೆಳ್ಳಿ, 5 ಕಂಚಿನ ಪದಕಗಳನ್ನು ಒಳಗೊಂಡಂತೆ ರಾಜ್ಯ, ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದ ಒಟ್ಟು 70 ರಷ್ಟು ಪದಕಗಳನ್ನು ಗೆದ್ದಿದ್ದಾಳೆ. ಪ್ಯಾಸ್ಕುವಲ್ ಗೆರೆರೋ ಸ್ಟೇಡಿಯಂ, ಕ್ಯಾಲಿ, ಕೊಲಂಬಿಯಾ ಮೊದಲಾದ ಕಡೆ ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತದ ಘನತೆಯನ್ನು ಎತ್ತಿಹಿಡಿದಿದ್ದಾಳೆ.

ಮಗಳ ಸಾಧನೆಯ ಬಗ್ಗೆ ಯಲ್ಲಪ್ಪ ಮನದುಂಬಿ ಮಾತನಾಡುತ್ತಾರೆ, ಇದೀಗ ಮುಂದೆ ಬರುವ ಕಾಮನ್ ವೆಲ್ತ್ ಗೇಮ್ಸ್ ಗೆ ತಯಾರಿ ಮಾಡುತ್ತಿದ್ದಾಳೆ. 2028 ರಲ್ಲಿ ನಡೆಯುವ ಓಲಂಪಿಕ್ಸ್ ಗೆ ನನ್ನ ಮಗಳು ನೂರಕ್ಕೆ ನೂರರಷ್ಟು ಆಯ್ಕೆಯಾಗುತ್ತಾಳೆ. ಭಾರತಕ್ಕೆ ಚಿನ್ನದ ಪದಕ ತಂದೇ ತರುತ್ತಾಳೆ' ಎಂದು ಆತ್ಮವಿಶ್ವಾಸದಿಂದ ಮಾತನಾಡುತ್ತಾರೆ. ನಂದಿನಿಯ ಈ ಯಶಸ್ಸಿನ ಹಾದಿ ಸುಲಭದ್ದಲ್ಲ, ಹಗಲು ರಾತ್ರಿಯೆನ್ನದೆ ಕನಸು ಮನಸಲ್ಲಿ ತಾನು ಆಡುವ ಆಟಗಳನ್ನೆ ಧ್ಯಾನಿಸುತ್ತಾ ನಿರಂತರ ತರಬೇತಿ ಯಿಂದಾಗಿ ಕಠಿಣ ಪರಿಶ್ರಮದಿಂದಾಗಿ ಈ ಮಟ್ಟಕ್ಕೆ ತಲು ಪಿದ್ದಾಳೆ.

ಇಸ್ತ್ರಿ ಮಾಡಿಯೂ, ಟೀ ಶಾಪ್ ನಡೆಸಿಯೂ ಕುಟುಂಬ ನಡೆಸಿ ಕಷ್ಟ ಪಟ್ಟು ಓದಿಸಿದ ತಂದೆ ತಾಯಿ ತಮ್ಮಂದಿರನ್ನು ಚನ್ನಾಗಿ ನೋಡಿಕೊಳ್ಳಬೇಕೆನ್ನುವುದು ನಂದಿನಿಯ ಕನಸು. ಇದೀಗ ಅಪ್ಪ ತನಗಾಗಿ ಮಾಡಿದ ಸಾಲವನ್ನೆಲ್ಲಾ ತೀರಿಸಿದ್ದಾಳೆ. ಅಪ್ಪನಿಗೆ ಮೆನ್ಸ್ ವೇರ್ ಬಟ್ಟೆಅಂಗಡಿ ಇಟ್ಟುಕೊಟ್ಟಿದ್ದಾಳೆ. ಸಿರುಗುಪ್ಪ ಸಮೀಪದ ಶ್ರೀನಗರ ಕ್ಯಾಂಪಿನಿಂದ ಚೈನಾದ ತನಕ ಪಯಣಿಸಿದ ನಂದಿನಿ ಅಗಸರ ಭವಿಷ್ಯ ಮತ್ತಷ್ಟು ಉಜ್ವಲವಾಗಲಿ, ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸೋಣ.

# ಕೃಷಿಗೆ ಹೆಚ್ಚಿನ ಉತ್ತೇಜನ ನೀಡಿ

**ಮೊದಲ ಪುಟದಿಂದ**

ಡೆಂಗೆ, ವಾಂತಿ ಬೇಧಿ ಪ್ರಕರಣಗಳ ಬಗ್ಗೆ ಸಂಸದರು ಪರಿಶೀಲಿಸಿದರು. ಜಿಲ್ಲೆಯಲ್ಲಿ ಇದುವರೆಗೆ 3208 ಜನರಿಗೆ ರಕ್ತ ತಪಾಸಣೆ ನಡೆಸಿದ ಪೈಕಿ 222 ಜನರಲ್ಲಿ ಡೆಂಗೆ ಸೋಂಕು ಪತ್ತೆಯಾಗಿದ್ದು, ಚಿಕಿತ್ಸೆ ಪಡೆದು ಎಲ್ಲರು ಗುಣಮುಖ ರಾಗಿದ್ದಾರೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ನರೇಗಾ ಯೋಜನೆಯು ಸಮರ್ಪಕ ಅನುಷ್ಠಾನವಾಗಬೇಕು. ನರೇಗಾ ಅನುದಾನ ಸದ್ಬಳಕೆಯಾಗಬೇಕು. ನರೇಗಾ ಕಾಮಗಾರಿ ಸ್ಥಳಗಳಿಗೆ ಅಧಿಕಾರಿಗಳು ಖುದ್ದು ಭೇಟಿ ನೀಡಿ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಹದ್ದಿನ ಕಣ್ಣಿಡಬೇಕು ಎಂದು ಸಂಸದರು ನರೇಗಾ ಅನುಷ್ಠಾನಾಧಿಕಾರಿಗಳಿಗೆ ಸೂಚನೆ ನೀಡಿದರು.



ಎಷ್ಟು ರಸ್ತೆಗಳಲ್ಲಿ ನೆಡುತೋಪು ಮಾಡಿದ್ದೀರಿ? ಇದುವರೆಗೆ ಎಷ್ಟು ಪ್ರಗತಿ ಸಾಧಿಸಿದ್ದೀರಿ ಎಂದು ಇದೆ ವೇಳೆ ಸಂಸದರು ಸಾಮಾಜಿಕ ಅರಣ್ಯ ವಿಭಾಗದ ಅಧಿಕಾರಿಗಳಿಗೆ ಪ್ರಶ್ನಿಸಿ, ಜಿಲ್ಲೆಯಾದ್ಯಂತ ಎಲ್ಲಾ ರಸ್ತೆಗಳಲ್ಲಿ ಶಿಸ್ತುಬದ್ಧವಾಗಿ ನೆಡು ತೋಪು ಮಾಡಲು ಕ್ರಮ ವಹಿಸಲು ಸೂಚನೆ ನೀಡಿದರು.

ಶಾಸಕ ಎಂ.ಪಿ.ಲತಾ ಮಲ್ಲಿಕಾರ್ಜುನ ಅವರು ಮಾತನಾಡಿ, ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಬಾಲ್ಯವಿವಾಹದಂತಹ ಪ್ರಕರಣಗಳು ಹೆಚ್ಚುತ್ತಿವೆ. ಈ ಜಾಗೃತಿ ಕಾರ್ಯಕ್ರಮಗಳು ಆಗಬೇಕು ಎಂದರು.

ಶಾಸಕ ಡಾ.ಎನ್.ಟಿ.ಶ್ರೀನಿವಾಸ ಮಾತನಾಡಿ, ಆರೋಗ್ಯ ಇಲಾಖೆಯಲ್ಲಿ ಯಾವುದೇ ವೃಂದದ ಸಿಬ್ಬಂದಿಯ ನೇಮಕವು ಪಾರದರ್ಶಕವಾಗಿ ನಡೆಯ ಬೇಕು. ಅರ್ಹರಿಗೆ ಉದ್ಯೋಗವಕಾಶ ದೊರೆಯುವಂತಾಗಬೇಕು ಎಂದರು.

ಸಭೆಯಲ್ಲಿ ಶಾಸಕ ಎಲ್.ಕೃಷ್ಣ ನಾಯ್ಕ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ ಷಾಹ, ಅಪರ ಜಿಲ್ಲಾಧಿಕಾರಿ ಇ ಬಾಲಕೃಷ್ಣಪ್ಪ, ಸಹಾಯಕ ಆಯುಕ್ತ ವಿವೇಕಾನಂದ ಪಿ., ಚಿದಾನಂದ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಭೀಮ್ಪಪ ಲಾಳಿ, ಮುಖ್ಯ ಯೋಜನಾಧಿಕಾರಿ ಅನ್ನದಾನಸ್ವಾಮಿ ಜೆ.ಎಂ. ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು, ತಹಸೀಲ್ದಾರರು, ತಾಲೂಕು ಪಂಚಾಯತ್ ಕಾರ್ಯ ನಿರ್ವ ಹಣಾಧಿಕಾರಿಗಳು ಇದ್ದರು.

# ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನ: ಕಾನೂನು ಅರಿವು ಕಾರ್ಯಕ್ರಮ

**ಮೊದಲ ಪುಟದಿಂದ**

ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಬ್ದುಲ್ ರಹೀಮಾನ ಎ.ನಂದಗಡಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಶಂಕರ್ ನಾಯ್ಕ್ ಎಲ್.ಎನ್ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಹೊಸಪೇಟೆ ತಾಲೂಕಿನ ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಹೇಮಲತಾ. ಬಿ. ಹುಲ್ಲೂರ, ಗೌರವಾನ್ವಿತ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಮೇಶ್ ಬಾಬು ಬಿ.ಎನ್., ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಪ್ರಶಾಂತ್ ನಾಗಲಾಪುರ್, ಅಪರ ಸಿವಿಲ್ ನ್ಯಾಯಾಧೀಶರಾದ ಅಶೋಕ ಆರ್.ಹೆಚ್., 2ನೇ ಅಪರ ಸಿವಿಲ್ ನ್ಯಾಯಾಧೀಶರಾದ ಸಂಜೀವ್ ಕುಮಾರ್ ಜಿ., 3ನೇ ಅಪರ ಸಿವಿಲ್ ನ್ಯಾಯಾಧೀಶರಾದ ಚೈತ್ರ. ಜೆ., ವಕೀಲರ ಸಂಘದ ಅಧ್ಯಕ್ಷರಾದ ಕೆ. ಪ್ರಹ್ಲಾದ್, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪಿ. ಶ್ರೀನಿವಾಸಮೂರ್ತಿ, ಹೊಸಪೇಟೆ ಗ್ರಾಮೀಣ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಾದ ಗುರುರಾಜ್ ಕಟ್ಟಿಮನಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಗವಿಸಿದ್ದಪ್ಪ ಹೊಸಮನಿ ಇವರು ಉಪಸ್ಥಿತರಿರುವರು ತಿಳಿಸಿದೆ.

## ಕವಿ ಮನಸು

### ಗುರುಗಳ ಎದುರಲಿ..



ಗುರುಗಳ ಪಾವನ ಚರಣಕೆ ನಮಿಸುವೆ
ಕರಗಳ ಜೋಡಿಸಿ ಮುಗಿವೆ
ತರುಣನೆ ಆಗಿರು ಗುರಿಯನು ತೋರಿದ
ಗುರುಗಳ ಎದುರು ಮಗುವೆ

ತುಂಟನ ಮಣಿಸಲು ದಂಟನು ಬಳಸದೆ
ಘಂಟೆಯ ಕೊರಳಿಗೆ ಬಿಗಿದು
ತಂಟೆಯ ಮನವನು ಕುಂಟಿಸಿ ಮನದಲಿ
ನಂಟನು ಬೆಸೆದುದು ಹಿರಿದು

ಉಳಿಯನು ಬಳಸದೆ ಶಿಲೆಯನು ಕೆತ್ತುವ
ಕಲೆಯಲಿ ಮೂಡಿದ ರೂಪ
ತಲೆಯಲಿ ತುಂಬಿದ ಕೊಳೆಯನು ತೊಲಗಿಸಿ
ಕಳೆದರು ಒಳಗಿನ ತಾಪ

ನುಣ್ಣಗೆ ಮಾಡಿದ ಮಣ್ಣಲಿ ರಚಿಸುತ
ಬಣ್ಣವ ಬಳಿದಿಹ ಬೊಂಬೆ
ಸುಣ್ಣದ ಗುಣವನು ಬೆಣ್ಣೆಗೆ ಬದಲಿಸಿ
ತಣ್ಣಗೆ ಮಾಡಿದರೆಂಬೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಏನು ಗಳಿಸಿದರೇನು ಫಲ

ಏನು ಗಳಿಸಿದರು ಏನು ಫಲ
ನೀ ಗಳಿಸಿದ್ದಾ ನೀ ಒಯ್ಯೊದಿಲ್ಲ

ಆಟ ಪಾತಗಳು ನಿನ್ನದಲ್ಲ
ಮೇಲೆ ಕುಳಿತವ ನಡೆಸುವ ಎಲ್ಲ

ಬಾಡಿಗೆ ಮನೆಯಿದು ತಿಳಿಲಿಲ್ಲ
ಸ್ವಂತ ಮನೆಯದು ನಿನ್ನದಿಲ್ಲ

ಮೂರು ದಿನದ ನಾಟಕವು
ಮುರಿದ ಮೇಲೆಲ್ಲಿದೆ ನಿನ್ನಾಟಿಕೆಯು

ಸ್ವಾರ್ಥದಿ ಬದುಕಿದರೆ ಏನು ಫಲ
ನಿಸ್ವಾರ್ಥದಿ ನೀ ನಡೆಯಲಿಲ್ಲ

ಎಷ್ಟು ಮಕ್ಕಳು ಇದ್ದರೇನು ಫಲ
ಕೊನೆಗಾಲದಿ ನಿಮ್ಮ ನೋಡಲಿಲ್ಲ

ಎಷ್ಟು ಓದಿದರೆ ಏನು ಫಲ
ಸಂಸ್ಕಾರವ ನೀ ಕಲಿಲಿಲ್ಲ

ಗುರು ಹಿರಿಯರು ಎನ್ನಲಿಲ್ಲ
ಗುರುತಿಸಿ ಗೌರವ ಕೊಡಲಿಲ್ಲ

ಎಷ್ಟು ದೇವರ ಪೂಜಿಸಿ ಏನು ಫಲ
ನಿಷ್ಠ ಭಕ್ತಿ ನಿನ್ನಲಿರಲಿಲ್ಲ

ಶರಣರ ಸಂಗವ ಮಾಡಲಿಲ್ಲ
ಗುರು ಸಂಗಮೇಶನ ಒಮ್ಮೆ ನೆನೆಲಿಲ್ಲ

– ಕೆ ಎಂ ಬಸವರಾಜ ಹೊಸಪೇಟೆ

COLD PRESSED OILS
HEALTH Benefits



- Heart Healthy
- Diabetes Friendly
- Healthy Skin & More
- Hair Fall Control

Nandi Enterprises
C/o HAMPI TIMES
Valmiki Circle, HOSAPETE
9482599089

# ಹೆಣ್ಣನ್ನು ಹೊನ್ನು ಮಣ್ಣಿನಂತೆ ಸ್ವತ್ತೆಂದು ಪರಿಭಾವಿಸಲಾದೀತೆ..?

ಈ ಜೀವ ಜಗತ್ತಿನಲ್ಲಿ ಮನುಷ್ಯ ಜೀವಿಗಳನ್ನು ಸ್ವತ್ತೆಂದು ಹೇಳಲಾಗದು. ಹಾಗೆ ಹೇಳಿದರೆ ಅವು ಮಾರಾಟದ ಸರಕಾಗಿ ಬಿಡುತ್ತವೆ. ಮಾರಾಟ ಅಥವಾ ವ್ಯಾಪರವೆಂದರೆ..? ಒಂದರ್ಥದಲ್ಲಿ ಮೋಸವೇ ಆಗಿದೆ. ಈ ಕೊಡು-ಕೊಳ್ಳಿಯಲ್ಲಿ ವ್ಯಕ್ತಿಯು ತನ್ನ ವ್ಯವಹಾರ ಕುಶಲತೆಯನ್ನು ಮೆರೆಯುತ್ತಾನೆ. ಈ ಕುಶಲತೆಯನ್ನು ಕರಗತ ಮಾಡಿಕೊಡಲೆಂದೇ ಎಲ್ಲ ವಿಶ್ವವಿದ್ಯಾಲಯಗಳು ಬಿ.ಕಾಂ, ಎಂ.ಕಾಂ, ಬಿ.ಬಿಎಂ, ಎಂ.ಬಿ.ಎ. ಗಳೆಂಬ ಅಧ್ಯಯನ ಶಾಖೆ, ಕೇಂದ್ರ, ಪೀಠಗಳನ್ನು ಮುಕ್ತವಾಗಿ ತೆರೆದಿಟ್ಟಿವೆ. ಹೆಣ್ಣನ್ನು ಸ್ವತ್ತೆಂದು ಪರಿಭಾವಿಸುವ ಮೂರ್ಖನು/ಳು ನಾನಲ್ಲ, ಅಂಥ ಮೂರ್ಖತನ ನನ್ನಲಿಲ್ಲ. ಆ ಸರಕನ್ನು ಕೊಂಡುಕೊಳ್ಳುವ ಧನಿಕತನ, ಸಿನಿಕತನ, ಸ್ವತ್ತನ್ನು ಸ್ವಂತವಾಗಿಸಿಕೊಳ್ಳುವ ಯಾವುದೇ ಹಪಾಹಪಿತನ ನನ್ನಲಿಲ್ಲ.

ಯುಗಯುಗಾಂತರದ ಆಚೆಗಿನ ಒಂದು ಕಾಲಘಟ್ಟದಲ್ಲಿ ಹೆಣ್ಣು, ಮಣ್ಣು, ಹೊನ್ನನ್ನು ಮಾಯೆ ಎಂದು ಕರೆದು, ಭೋಗದವಸ್ತುವೆಂದು ಜರಿದು, ಧರ್ಮ ಸಮ್ಮತವಾಗಿಯೇ... ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯವ್ವನೇ ?ರಕ್ಷಂತಿ ಸ್ಥವಿರೇ ಪುತ್ರಾ ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ ? -ಧರ್ಮಶಾಸ್ತ್ರ, ಮನುಸ್ಮೃತಿ

ಮೇಲಿನ ದಾರ್ಶನಿಕನೊಬ್ಬನ ಅಣತಿಯಂತೆ ಗಂಗೆಯನ್ನು ಜಲಾಗಾರಗಳಲ್ಲಿ ಹಿಡಿದಿಡುವ ಪ್ರಯತ್ನ ಅಂದಿನಿಂದ ಇಂದಿನವರೆಗೂ ಹವ್ಯಾತವಾಗಿ ನಡೆದುಕೊಂಡುಬಂದ ಪದ್ಧತಿಯಾಗಿದೆ. ನೀರಿನ ಒಳ ಹರಿವು ಹೆಚ್ಚಿದಾಗ ಹೊರ ಹರಿವು ಕೊಡಲೇಬೇಕು ಎಂಬುದು ನಿರ್ವಿವಾದದ ಸಂಗತಿ. ಮನುಷ್ಯನಿಗೆ ಅನುಕೂಲವಾದದ್ದೆಲ್ಲವೂ ಧರ್ಮ, ಅನನುಕೂಲವಾದದ್ದೆಲ್ಲವೂ ಅಧರ್ಮ ಎಂಬರ್ಥದಲ್ಲಿ ಅನಾದಿ ಕಾಲ ದಿಂದ್ದಿಡಿದು ಪ್ರಸ್ತುತ ಕಾಲಘಟ್ಟದವರೆಗೂ ಈ ನೀತಿ-ನಿಯಮ, ಸಂಪ್ರದಾಯ, ಆಚರಣೆಗಳು, ಸಾಮಾಜಿಕ ಕಟ್ಟುಪಾಡುಗಳೆಲ್ಲವೂ ಹೆಣ್ಣು-ಗಂಡೆಂಬ ತರತಮ ಭಾವದಿ, ಹೆಣ್ಣನ್ನು ತನ್ನ ಅಧೀನಳನ್ನಾಗಿ ಸಿಕೊಳ್ಳುವ ಪ್ರವೃತ್ತಿಯನ್ನೇ ತೋರುತ್ತ ಮನುಷ್ಯ ಮುಂದಡಿಯಿಡುತ್ತಿದ್ದಾನೆ. ಕೊಡಲಿಯ ಕಾವು ಕುಲಕ್ಕೆ ಮೃತ್ಯು ಎಂಬ ಜನಜನಿತ ಗಾದೆಮಾತಿನಂತೆ ಹೆಣ್ಣಿನಿಂದಲೇ ತನ್ನ ಅಸ್ತಿತ್ವವನ್ನು ಪಡೆದವನು ಹೆಣ್ಣನ್ನಾಳಬೇಕು ಎಂಬ ಚಿತ್ತಭ್ರಮೆಯಲ್ಲಿಮುಳುಗೇಳುತ್ತಿರುವುದು ವಿಷಾದನೀಯ ಸಂಗತಿಯೇ ಸರಿ. ಇಂದು ಹೆಣ್ಣಿಗೆ ಸಂರಕ್ಷಣೆ ಬೇಕು ಎನ್ನುವುದಕ್ಕಿಂತ ರಕ್ಷಣೆ ಬೇಕು ಎಂಬುದು ಹೆಚ್ಚು ಅರ್ಥ ಪೂರ್ಣ ವೆನಿಸುತ್ತದೆ.



ಡಾ ಯಲ್ಲಮ್ಮ ಕೆ.
ಮಲಪನಗುಡಿ ಹೊಸಪೇಟೆ

Scan For Digital Colourful
HAMPI TIMES E-paper

ಆದರೆ ಯಾರಿಂದ ರಕ್ಷಣೆ ಎಂಬುದು ಇಲ್ಲಿ ಯಕ್ಷ ಪ್ರಶ್ನೆ..? ತಂದೆ-ತಾಯಿ, ಗಂಡ- ಹೆಂಡತಿ, ಅಣ್ಣ-ತಂಗಿ, ಅಕ್ಕ-ತಮ್ಮ, ನೆರೆಹೊರೆಯವರಿಂದ ಯಾರಿಂದ..? ಯಾರಿಗೆ ಬೇಕು ರಕ್ಷಣೆ..? ಹಾಗಾದರೆ ನಾವಿಂದು ಎಲ್ಲಿ ಬದುಕುತ್ತಿದ್ದೇವೆ..? ವನ್ಯಮೃಗ-ಖಗಗಳಿರುವ ಗೊಂಡಾರಣ್ಯದಲ್ಲೋ..? ನಾಗರೀಕ ಸಮಾಜದಲ್ಲೋ..? ನಿಜಕ್ಕೂ ಸಂಶಯ ಮೂಡುತ್ತಿದೆ. ಹೆಣ್ಣಿಗೆ ಈ ಭೀತಿ ಎದಿರಾಗಿರುವುದು ಯಾರಿಂದ..? ಹಾಗಾದರೆ ಈ ಸ್ವರಕ್ಷಣೆಯ ಭೀತಿ



ಪುರುಷರಿಗೆ ಇಲ್ಲವೇ..? ಕಡಲ್ಗಳ್ಳರಿಂದ ರಕ್ಷಿಸಿಕೊಳ್ಳಬಹುದು ಆದರೆ ಒಡಲ್ಗಳ್ಳರಿಂದ ಹೆಣ್ಣಿಗೆ ರಕ್ಷಣೆ ನೀಡುವವರು ಯಾರು..? ನಾವು ದಾರಿಯಲ್ಲಿ ಹೋಗಬೇಕಾದರೆ ಯಾರಾದರೂ ಚುಡಾಯಿಸಿದ ಸುದ್ದಿ ತಿಳಿದ ಕ್ರೋಧಗೊಳ್ಳುವ ನನ್ನ ಸಹೋದರರು ತಾವು ದಾರಿಯಲ್ಲಿ ಒಂಟಿಯಾಗಿ ಸಿಕ್ಕ ಮಹಿಳೆಯ ಮೇಲೆ ಅತ್ಯಾಚಾರವೆಸಗುವ ಸಂದರ್ಭದಿ ಅವರನ್ನು ತಮ್ಮ ಸಹೋದರಿಯರು ಎಂದೇಕೆ ಭಾವಿಸುವುದಿಲ್ಲ..? ಈ ಕೋರ್ಟು, ಕಛೇರಿ, ಕಾನೂನು, ನ್ಯಾಯ-ನೀತಿ, ನಿಯಮಗಳೆಲ್ಲವೂ ಉಳ್ಳವರ ಪಾಲಾಗಿರುವಾಗ ಅಬಲೆಯರಿಗೆ ರಕ್ಷಣೆ ಇನ್ನೆಲ್ಲಿ ಸಿಗಬೇಕು..? ಈ ಹಿನ್ನಲೆಯಲ್ಲಿ ನೋಡುವುದಾದರೆ... ಹೆಣ್ಣು ಶಿಕ್ಷಣ ಎನ್ನುವ ರಹದಾರಿಯ ಮೂಲಕ ಸ್ವರಕ್ಷಣೆ ಮಾಡಿಕೊಂಡು, ಸ್ವಾವಲಂಬನೆಯ ಬದುಕನ್ನು ಕಟ್ಟಿಕೊಳ್ಳವುದೇ ಸ್ತ್ರೀ ಅಸ್ಮತೆಯಾಗಿದೆ ; ಅದೇ ಸ್ತ್ರೀತ್ವದ ತಿರುಳಾಗಿದೆ. ಸ್ತ್ರೀ, ಸ್ತ್ರೀತ್ವ, ಸ್ತ್ರೀವಾದಿ ಎಂದರೆ..? ಕೆಂಗಣ್ಣಿನಿಂದ ನೋಡುತ್ತ, ಪುರುಷ ವಿರೋಧಿ ಎಂದೇ ಬಿಂಬಿಸಿಕೊಂಡು ಬಂದಿರುವಂತದ್ದು, ಬದಲಾಗಿ ಅದು ವಾಸ್ತವದಲ್ಲಿ ತನ್ನ ಸ್ವಾಭಿಮಾನಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳುವ ಹೆಣ್ಣಿನ ತಣ್ಣನೆಯ ಸಾಮೂಹಿಕ ಪ್ರತಿರೋಧವಾಗಿದೆ.

ಹೆಣ್ಣು ಧಾರ್ಮಿಕತೆಯನ್ನು, ಸಾಮಾಜಿಕ ಹೊಣೆಗಾರಿಕೆಯನ್ನು ಧಿಕ್ಕರಿಸಿ ಎಂದೂ ಸಾಗಳೂ, ವಿವಾಹದ ಮೂಲಕ ಪವಿತ್ರ ದಾಂಪತ್ಯದ ಬದುಕಿನ ಬಂಡಿಯ ನೊಗಕ್ಕೆ ಅವಳು ಮನಸಾ ಹೆಗಲು ನೀಡುತ್ತಾಳೆ. ದಣಿವರಿಯದೇ ದುಡಿವ ಎತ್ತಾಗುತ್ತಾಳೆ, ಸ್ವತ್ತೆಂದು, ತೊತ್ತೆಂದು ಭಾವಿಸದಿರಿ... ಸುದೀರ್ಘ ಬಾಳ ಪಯಣದಲ್ಲಿ ಸಹಚಾರಿಣಿಯಾಗಿ ಸಾಗುತ್ತಾಳೇ ವಿನಃ ಯಾರೊಬ್ಬಳ ಸ್ವತ್ತಾಗಲೊಲ್ಲಳು. ಅಂತೆಯೇ ಹೆಣ್ಣೆಂದರೆ..? ಪೆರರ್ ಒಡವೆ ಎಂಬ ಮಹರ್ಷಿ ವಾಲ್ಮೀಯ ಮಾತಿಗೆ ತಲೆಬಾಗಿ ತನ್ನತನವನ್ನು ಬಲಿ ಕೊಡದೇ. ತನ್ನ ಬದುಕನ್ನು ತನ್ನಂತೆಯೇ ಅನುಭವಿಸುವ ಭಾವ ಜೀವಿಯವಳು, ನಿತ್ಯ ನಿರಂತರವಾಗಿ, ಸ್ವಚ್ಛಂದವಾಗಿ ಪ್ರವಹಿಸುವ ಜೀವಗಂಗೆಯವಳು, ಸೀಮಾತೀತಳು ಈ ಹೆಣ್ಣು.

# ಮನದ ಭಯ ಹೋಗಲಾಡಿಸಿ ಮಾನಸಿಕವಾಗಿ ಸದೃಢರಾಗಿ

## ನ್ಯಾ.ರಾಜೇಶ್ ಎನ್.ಹೊಸಮನೆ ಹೇಳಿಕೆ | ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ

■ ಹಂಪಿ ಟೈಮ್ಸ್ ಬಳ್ಳಾರಿ

ಅಭಿವೃದ್ಧಿ ದೇಶ ಕಟ್ಟುವಲ್ಲಿ ವಿದ್ಯಾರ್ಥಿಗಳ ಪಾತ್ರ ಪ್ರಮುಖವಾಗಿದ್ದು, ಖಿನ್ನತೆಗೊಳಗಾದ ವಿದ್ಯಾರ್ಥಿಗಳು ತಮ್ಮೊಳಗಿನ ಭಯ ಹೋಗಲಾಡಿಸಿ, ಮಾನಸಿಕವಾಗಿ ಸದೃಢರಾಗಿ ಉತ್ತಮ ಜೀವನ ನಡೆಸಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ರಾಜೇಶ್ ಎನ್.ಹೊಸಮನೆ ಹೇಳಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಆಸ್ಪತ್ರೆ, ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಕಾರಾಗೃಹ ಇಲಾಖೆ, ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ವಕೀಲರ ಸಂಘ, ಸಮಾಜ ಕಲ್ಯಾಣ ಇಲಾಖೆ, ಅಬಕಾರಿ ಇಲಾಖೆ, ಹಾನಗಲ್ ಶ್ರೀ ಕುಮಾರೇಶ್ವರ ಪಾಲಿಟೆಕ್ನಿಕ್ ಕಾಲೇಜ್ ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮವಿಭಾಗಇವರಸಂಯುಕ್ತಾಶ್ರಯದಲ್ಲಿ ನಗರದ ಹಾನಗಲ್ ಶ್ರೀ ಕುಮಾರೇಶ್ವರ ಪಾಲಿಟೆಕ್ನಿಕ್ ಕಾಲೇಜಿನ ಸಭಾಂಗಣದಲ್ಲಿ "ಆತ್ಮಹತ್ಯೆ ಬಗ್ಗೆ ಇರುವ ಅಭಿಪ್ರಾಯವನ್ನು ಬದಲಿಸಿ" ಎಂಬ ಘೋಷ ವಾಕ್ಯದಡಿ ಮಂಗಳವಾರ ಏರ್ಪಡಿಸಲಾಗಿದ್ದ 'ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ' ಜಾಗೃತಿ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜೀವನದ ಬಗ್ಗೆ ಜಿಗುಪ್ಸೆ, ಕೌಟುಂಬಿಕ ಕಲಹ, ವ್ಯಯಕ್ತಿಕ ಸಮಸ್ಯೆ, ಬಡತನ, ಆರ್ಥಿಕ ಸಮಸ್ಯೆ ಸೇರಿದಂತೆ ಇನ್ನಿತರ ಕ್ಷುಲ್ಲಕ ಕಾರಣಗಳಿಂದ ಮನನೊಂದು ಆತ್ಮಹತ್ಯೆ ನಿರ್ಧಾರ ತೆಗೆದುಕೊಂಡು ತಮ್ಮ ಅಮೂಲ್ಯ ಜೀವನ ಮೃತ್ಯುಪಾಶಕ್ಕೆ ತಳ್ಳದೆ ಎಲ್ಲಾ ರೀತಿಯ ಮಾನಸಿಕ ಖಿನ್ನತೆಗಳನ್ನು ಧೈರ್ಯದಿಂದ ಎದುರಿಸಿ ಜೀವನ ನಡೆಸಬೇಕು ಎಂದರು.

ಸಮಾಜದ ಎಲ್ಲಾ ವಿಭಾಗಗಲ್ಲಿ ಆತ್ಮಹತ್ಯೆ ಘಟನೆಗಳು ನಡೆಯುತ್ತಲಿದ್ದು, ಅದರಲ್ಲಿ ಹೆಚ್ಚಾಗಿ ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಯುವಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ತಮಗಿರುವ ಒತ್ತಡವನ್ನು ನಿಗ್ರಹಿಸಿಕೊಳ್ಳಲು ಹತ್ತಿರದ ಮನೋವೈದ್ಯರೊಡನೆ ಸಮಾಲೋಚನೆ ಮಾಡಿ ಆತ್ಮಹತ್ಯೆಯಿಂದ ದೂರ ಉಳಿಯಬೇಕು ಎಂದು ತಿಳಿಸಿದರು.

ಮಕ್ಕಳು ಪರೀಕ್ಷೆ-ಫಲಿತಾಂಶಗಳ ಕುರಿತು ಆತಂಕಕ್ಕೆ ಒಳಗಾಗಿ ಆತ್ಮಹತ್ಯೆಗೆ ಪ್ರಚೋದನೆಗೆಗೊಳಗಾಗದೇ ಆತ್ಮಸ್ಥೈರ್ಯದಿಂದ ಎದುರಿಸಬೇಕು ಎಂದರು. ನಿಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಕುಟುಂಬದಲ್ಲಿ ಯಾರಾದರೂ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದರೆ ಅವರಿಗೆ ಮಾನಸಿಕ ಆರೋಗ್ಯ ನಿರ್ವಹಣೆಯ ಕುರಿತು ಜಾಗೃತಿ ಮೂಡಿಸಬೇಕು ಎಂದರು.

ದೇಶದಲ್ಲಿ ಪ್ರತಿ 4 ಸೆಕೆಂಡ್‌ಗೆ ಒಬ್ಬರಂತೆ 1.80 ಲಕ್ಷ ಜನರು ವಾರ್ಷಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ವರದಿಯಿದೆ. ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿ ಮಾನಸಿಕ ಖಿನ್ನತೆಗಳಗಾದರೊಡನೆ ಸಮಾಲೋಚನೆ ನಡೆಸಿ ಕಳೆದ ನಾಲ್ಕು ವರ್ಷಗಳಿಂದ 547 ಜನರ ಮನಃಪರಿವರ್ತನೆ ಮಾಡಿ ಆತ್ಮಹತ್ಯೆಯಿಂದ ದೂರಗೊಳಿಸಿರುವುದು ಸಂತಸದ ವಿಷಯವಾಗಿದೆ ಎಂದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗದ ಮನರೋಗ ತಜ್ಞ ಡಾ.ರೋಹನ್ ವನಗುಂದಿ ಕಾರ್ಯಕ್ರಮ ಕುರಿತ ವಿಶೇಷ ಉಪನ್ಯಾಸ ನೀಡುತ್ತಾ, ವೈಯಕ್ತಿಕ ಜೀವನ, ವೃತ್ತಿ ಜೀವನ, ಕೌಟುಂಬಿಕ ಜೀವನ, ಸಾಮಾಜಿಕ ಜೀವನದಲ್ಲಿ ಎಲ್ಲಾ ವರ್ಗದ ಜನರಿಗೆ ಒತ್ತಡ ಬರುವುದು ಸಹಜ ಅದನ್ನು ಸಮತೋಲನ ಭಾವನೆಯಿಂದ ನಿರ್ವಹಿಸಬೇಕು ಎಂದರು.

ಜನಸಾಮಾನ್ಯರು ದೈಹಿಕವಾಗಿ ಸದೃಢರಾಗಲು ವ್ಯಾಯಾಮ, ಕಸರತ್ತು, ಡಯಟ್‌ನಂತಹ ಜೀವನ ಶೈಲಿಗೆ ಮೊರೆಹೋಗುತ್ತಾರೆ. ಆದರೆ ಮಾನಸಿಕವಾಗಿ ಆರೋಗ್ಯದಿಂದಿರಲು ಯೋಗ, ಧ್ಯಾನ, ದೃಢವಾದ ಆತ್ಮವಿಶ್ವಾಸ ಹಾಗೂ ಧನಾತ್ಮಕ ಯೋಚನೆಗಳಿಂದ ಮಾತ್ರ ಸಾಧ್ಯವಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಅನುಷ್ಠಾನ ಅಧಿಕಾರಿ ಹಾಗೂ ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಡಾ.ವೀರೇಂದ್ರ ಕುಮಾರ್ ಕೆ.ಜಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಎಲ್ಲಾ ವಯಸ್ಕರು ಆತ್ಮಹತ್ಯೆಗೆ ಬಲಿಯಾಗುತ್ತಿದ್ದು, ಸಮಸ್ಯೆಗಳಿಗೆ ಸಾವು ಒಂದೇ ಪರಿಹಾರವಾಗಿರುವುದಿಲ್ಲ. ನಿಜ ಜೀವನದ ಕುರಿತು ಮನದಟ್ಟಣೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಮಾನಸಿಕ ಖಾಯಿಲೆಗೆ ಭಯಬೀತರಗಾದೆ ನಿಮ್ಮಲ್ಲಿರುವ ಗೊಂದಲ, ಪ್ರಶ್ನೆಗಳಿಗೆ ನಿಮ್ಮ ನೆರೆಹೊರೆಯವ ಹತ್ತಿರ ಮಾತನಾಡಿ, >>4

# ಮಾನವ ಸರಪಳಿ ಕಾರ್ಯಕ್ರಮಕ್ಕೆ ಸಾರ್ವಜನಿಕರು ಸಹಕರಿಸಲಿ

■ ಹಂಪಿ ಟೈಮ್ಸ್ ಹೊಸಪೇಟೆ

ಸೆಪ್ಟೆಂಬರ್ 15 ರಂದು ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ರಾಜ್ಯ ಸರ್ಕಾರದ ನಿರ್ದೇಶನದಂತೆ ವಿಜಯನಗರ ಜಿಲ್ಲೆಯಲ್ಲಿ ನಡೆಸುವ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಮನವಿ ಮಾಡಿದ್ದಾರೆ.

ರಾಜ್ಯ ಸರಕಾರದಿಂದ ಈ ಕಾರ್ಯಕ್ರಮವು ಬೀದರ್‌ನಿಂದ ಚಾಮರಾಜನಗರದವರೆಗೆ ಎಲ್ಲ ಕಡೆಗಳಲ್ಲಿ ನಡೆಯಲಿದೆ. ಸಂವಿಧಾನದ ಗೌರವ, ಘನತೆಯನ್ನು ಹೆಚ್ಚಿಸುವ ಉದ್ದೇಶದಿಂದ ಎಲ್ಲಾ ಕಡೆಗೆ ಬೃಹತ್ ಮಾನವ ಸರಪಳಿ ರಚಿಸುವ ಕಾರ್ಯಕ್ರಮ ಹಮ್ಮಿಕೊಂಡಿದೆ. ಅದರ ಭಾಗವಾಗಿ ವಿಜಯನಗರ ಜಿಲ್ಲೆಯಲ್ಲಿ ಸೆಪ್ಟೆಂಬರ್ 15ರ ಬೆಳಗ್ಗೆ 7.30 ರಿಂದ ಹೊಸಪೇಟೆ ತಾಲೂಕಿನ ಟಿ.ಬಿ.ಡ್ಯಾಂನ ಮೊದಲ ಸೇತವೆಯಿಂದ

ಗಣೇಶ ದೇವಸ್ಥಾನದವರೆಗೆ 1 ಕಿ.ಮೀ., ಗಣೇಶ ದೇವಸ್ಥಾನದಿಂದ ಸಾಯಿಬಾಬಾ ಸರ್ಕಲ್‌ದವರೆಗೆ 3 ಕಿ.ಮೀ, ಸಾಯಿಬಾಬಾ ಸರ್ಕಲ್‌ನಿಂದ ಬಸವೇಶ್ವರ ಸರ್ಕಲ್‌ವರೆಗೆ 2 ಕಿ.ಮೀ, ಬಸವೇಶ್ವರ ಸರ್ಕಲ್‌ದಿಂದ ಅಪ್ಪು ಸರ್ಕಲ್‌ವರೆಗೆ 2 ಕಿ.ಮೀ., ಅಪ್ಪು ಸರ್ಕಲ್‌ನಿಂದ ಬಳ್ಳಾರಿ ರೋಡ್ ಸರ್ಕಲ್ ವರೆಗೆ 1.5 ಕಿ.ಮೀ., ಬಳ್ಳಾರಿ ರೋಡ್ ಸರ್ಕಲ್‌ದಿಂದ ಕಾರಿಗನೂರು ವರೆಗೆ 4 ಕಿ.ಮೀ., ಕಾರಿಗನೂರಿದಿಂದ ವಡ್ಡರಹಳ್ಳಿವರೆಗೆ 5 ಕಿ.ಮೀ., ವಡ್ಡರಹಳ್ಳಿದಿಂದ ಪಿ.ಕೆ.ಹಳ್ಳಿವರೆಗೆ 3 ಕಿ.ಮೀ, ಪಿ.ಕೆ.ಹಳ್ಳಿಯಿಂದ ಬಯಲುವದ್ದಿಗೆರಿವರೆಗೆ 4 ಕಿ.ಮೀ., ಬಯಲುವದ್ದಿಗೇರಿಯಿಂದ ಧರ್ಮಸಾಗರ ವರೆಗೆ 5 ಕಿ.ಮೀ., ಧರ್ಮಸಾಗರದಿಂದ ಗಾದಿಗನೂರುವರೆಗೆ 4 ಕಿ.ಮೀ., ಅಂತಿಮವಾಗಿ ಗಾದಿಗನೂರು ದಿಂದ ಭುವನಹಳ್ಳಿ ಗ್ರಾಮದವರೆಗೆ 3 ಕಿ.ಮೀ ಸೇರಿ ಒಟ್ಟು 38 ಕಿಲೋ ಮೀಟರ್ ಮಾನವ ಸರಪಳಿಯನ್ನು ವಿಜಯನಗರ ಜಿಲ್ಲಾ ವ್ಯಾಪ್ತಿಯಲ್ಲಿ ರಚಿಸಲಾಗುತ್ತದೆ.

ರಾಜ್ಯಾದ್ಯಂತ ಏಕಕಾಲಕ್ಕೆ ಬೃಹತ್ ಮಾನವ ಸರಪಳಿ ನಿರ್ಮಿಸುತ್ತಿರುವುದರಿಂದ ವಿಜಯನಗರ ಜಿಲ್ಲಾ ವ್ಯಾಪ್ತಿಯಲ್ಲಿ ಸಹ ಈ ಕಾರ್ಯಕ್ರಮವು ಸೆಪ್ಟೆಂಬರ್ 15ರಂದು ಅಚ್ಚುಕಟ್ಟಾಗಿ ನಡೆಯಬೇಕು. ಈ ಮಾನವ ಸರಪಳಿ ನಿರ್ಮಿಸಲು ಸಾವಿರರು ಸಂಖ್ಯೆಯಲ್ಲಿ ಜನರನ್ನು ಸೇರಿಸಬೇಕಾಗಿದೆ. ಹಾಗಾಗಿ ಜಿಲ್ಲೆಯ ಸಾರ್ವಜನಿಕರು ಸ್ವ-ಇಚ್ಛೆಯಿಂದ ಈ ಬೃಹತ್ ಮಾನವ ಸರಪಳಿಗೆಯಲ್ಲಿ ಭಾಗವಹಿಸಿ ನಮ್ಮ ಸಂವಿಧಾನದ ಗೌರವ ಮತ್ತು ಘನತೆಯನ್ನು ಹೆಚ್ಚಿಸುವಲ್ಲಿ ಪಾತ್ರರಾಗಬೇಕು ಎಂದು ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಪ್ರಕಟಣೆಯ ಮೂಲಕ ಜಿಲ್ಲೆಯ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ
ಸುದ್ದಿ, ಲೇಖನ ಓದಿರಿ...
www.hampitimes.com

ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**11–09–2024 – ಬುಧವಾರ**

| | |
|---|---|
| ತಿಥಿ | : ಅಷ್ಟಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಜ್ಯೇಷ್ಠ |
| ಯೋಗ | : ಪ್ರೀತಿ |
| ಕರಣ | : ವಿಷ್ಟಿ (ಭದ್ರ) |
| ಸೂರ್ಯೋದಯ | : 06:13:25 |
| ಸೂರ್ಯಾಸ್ತ | : 18:34:03 |
| ರಾಹು ಕಾಲ | : 12:23–13:56 |
| ಯಮಘಂಡ ಕಾಲ | : 07:46–09:18 |
| ಗುಳಿಕ ಕಾಲ | : 10:51–12:23 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 10–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.86 ಅಡಿ |
| ಒಳ ಹರಿವು | 28726 ಕ್ಯುಸೆಕ್ |
| ಹೊರ ಹರಿವು | 34756 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.226 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1622.89 ಅಡಿ |
| ಒಳ ಹರಿವು | 1405 ಕ್ಯುಸೆಕ್ |
| ಹೊರ ಹರಿವು | 9997 ಕ್ಯುಸೆಕ್ |
| ಸಾಮರ್ಥ್ಯ | 69.807 ಟಿಎಂಸಿ |

# ಶಿಶುವಿಗೆ ಲಸಿಕೆ ನಿಡಲು ಪಾಲಕರ ಮನವೊಲಿಸಿ

## ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ ಹೇಳಿಕೆ

■ ಹಂಪಿ ಟೈಮ್ಸ್ ಬಳ್ಳಾರಿ

ಹೆರಿಗೆ ನಂತರದಲ್ಲಿ ನವಜಾತ ಶಿಶುವಿಗೆ 12 ಮಾರಕ ರೋಗಗಳ ವಿರುದ್ಧ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ವಯಸ್ಸಿಗನುಸಾರವಾಗಿ ನೀಡುವ ಲಸಿಕೆಗಳನ್ನು ತಪ್ಪದೇ ಕೊಡಿಸಲು ಪಾಲಕರ ಮನವೊಲಿಸಿ ಎಂದು ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ ಅವರು ವೈದ್ಯಾಧಿಕಾರಿಗಳಿಗೆ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ವಿಶ್ವ ಆರೋಗ್ಯ ಸಂಸ್ಥೆ ಬಳ್ಳಾರಿ ವಲಯ ಕಚೇರಿ ವತಿಯಿಂದ ನಗರದ ಅಲ್ಲಂ ಗೋಕುಲಂ ಭವನದಲ್ಲಿ ವೈದ್ಯಾಧಿಕಾರಿಗಳು ಮತ್ತು ಕ್ಷೇತ್ರ ಸಿಬ್ಬಂದಿಯವರಿಗೆ ಏರ್ಪಡಿಸಿದ್ದ ಜಾಗೃತಿ ಕಾರ್ಯಾಗಾರದಲ್ಲಿ ಮಾತನಾಡಿದರು.

ಮಗುವಿಗೆ ಬಾಲ್ಯಾವಧಿ ಕಾಡುವ ಮಾರಕ ರೋಗಗಳನ್ನು ತಡೆಗಟ್ಟಲು ಪೋಲಿಯೋ ರೋಗಕ್ಕೆ ಪೋಲಿಯೋ ದ್ರಾವಣ, ಬಾಲಕ್ಷಯಕ್ಕೆ ಬಿಸಿಜಿ ಲಸಿಕೆ, ಕಾಮಾಲೆ ರೋಗಕ್ಕೆ ಹೆಪಟೈಟಿಸ್ ಚುಚ್ಚುಮದ್ದು, ಗಂಟಲು ಮಾರಿ, ನಾಯಿಕೆಮ್ಮು ಧನುರ್ವಾಯು ರೋಟ ವೈರಸ್, ಹೆಚ್ ಇನ್‌ಫ್ಲುಯೆಂಜಾ, ಕಾಮಾಲೆಗಾಗಿ ಪೆಂಟಾವೈಲೆಂಟ್ ಲಸಿಕೆ, ರೋಟಾವೈರಸ್ ಅತಿಸಾರಭೇದಿಗೆ ನಿಮೋಕಾಕಲ್ ಲಸಿಕೆ, ಮೆದುಳು ಜ್ವರ ರೋಗಕ್ಕೆ ಜಾಪನೀಸ್ ಎನ್‌ಸೆಫಲಿಟಿಸ್ ಲಸಿಕೆ, ದಡಾರ ರೂಬೆಲ್ಲಾ ರೋಗಕ್ಕೆ ಮಿಸಲ್ಸ್ ರೂಬೆಲ್ಲಾ ಲಸಿಕೆ ಹಾಗೂ ಸಂಜೆಯ ಹೊತ್ತು ಕಂಡುಬರುವ ಇರುಳುಗಣ್ಣು ರೋಗಕ್ಕೆ ವಿಟಾಮಿನ್–ಎ ಅನ್ನಾಂಗ ದ್ರಾವಣ ನೀಡಲಾಗುತ್ತಿದ್ದು, ಇವೆಲ್ಲವುಗಳನ್ನು ಮಗುವಿನ ಒಂದು ವರ್ಷದೊಳಗೆ ತಪ್ಪದೇ ಕೊಡಿಸಲು ಪೋಷಕರಿಗೆ ತಿಳಿಸಬೇಕು ಎಂದರು.



ಪ್ರತಿ ಅರೋಗ್ಯ ಕೇಂದ್ರಗಳಲ್ಲಿ ಹಾಗೂ ಗ್ರಾಮ ವಾರ್ಡ್‌ಗಳಲ್ಲಿ ಪ್ರತಿ ಗುರುವಾರ ಹಾಕುವ ಬಗ್ಗೆ ಹೆಚ್ಚು ಜಾಗೃತಿ ನೀಡಲು ಕೊರಿದರು.

ವಿಶ್ವ ಆರೋಗ್ಯ ಸಂಸ್ಥೆಯ ಸರ್ವೇಕ್ಷಣಾ ವೈದ್ಯಾಧಿಕಾರಿ ಡಾ.ಆರ್.ಎಸ್.ಶ್ರೀಧರ ಅವರು ಮಾತನಾಡಿ, ಪೋಲಿಯೋ, ಗಂಟಲುಮಾರಿ, ನಾಯಿ ಕೆಮ್ಮು, ಧನುರ್ವಾಯು, ದಡಾರ–ರೂಬೆಲ್ಲಾ ಮೆದುಳು ಜ್ವರಕ್ಕೆ 16 ರಿಂದ 23 ತಿಂಗಳು ಒಳಗೆ ಹೆಚ್ಚುವರಿಯಾಗಿ ಬೂಸ್ಟರ್ ಡೋಸ್ ರೂಪದಲ್ಲಿ ನೀಡಲಾಗುವುದು. 5 ರಿಂದ 6 ವರ್ಷದಲ್ಲಿ ಪುನಃ ಗಂಟಲುಮಾರಿ, ನಾಯಿ ಕೆಮ್ಮು, ಧನುರ್ವಾಯು, ರೋಗಿಗಳಿಗೆ ಎರಡನೇಯ ಬಾರಿ ಬೂಸ್ಟರ್ ಡೋಸ್ ನೀಡಲಾಗುವುದು ಎಂದು ಅವರು ತಿಳಿಸಿದರು.

ಗಾಳಿಸುದ್ದಿ ನಂಬಿ ಲಸಿಕೆ ಬೇಡವೆನ್ನುವವರಿಗೆ ಮನೆ ಭೇಟಿ, ಗುಂಪು ಸಭೆ, ಸಮುದಾಯ ಮುಖಂಡರ ಮೂಲಕ ಮಾಹಿತಿ ಒದಗಿಸಿ ಅವರಲ್ಲಿಯ ತಪ್ಪು ನಂಬಿಕೆಗಳನ್ನು ಹೋಗಲಾಡಿಸಿ ಎಲ್ಲಾ ಲಸಿಕೆಗಳನ್ನು ಹಾಕಿಸಲು ಶ್ರಮವಹಿಸಬೇಕು ಎಂದು ಕೋರಿದರು.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಆರ್.ಅಬ್ದುಲ್ಲಾ ಅವರು ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮಾಧಿಕಾರಿ ಡಾ.ಪೂರ್ಣಿಮಾ ಕಟ್ಟಿಮನಿ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವೀರೇಂದ್ರ ಕುಮಾರ್, ಹಿರಿಯ ವೈದ್ಯ ಡಾ.ನರಸಿಂಹ ಮೂರ್ತಿ, ಭಾರತೀಯ ಮಕ್ಕಳ ತಜ್ಞರ ಸಂಘದ ಡಾ.ಸುನೀಲ್, ಡಿಎನ್‌ಓ ಗಿರೀಶ್, ತಾಲ್ಲೂಕು ಆರೋಗ್ಯಾಧಿ ಕಾರಿಗಳಾದ ಡಾ.ಈರಣ್ಣ, ಡಾ.ಭರತ್, ಡಾ.ಅರುಣ್, ಡಾ.ಮಂಜುನಾಥ ಜವಳಿ ಸೇರಿದಂತೆ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿ ಕಾರಿಗಳು ಮತ್ತು ಇನ್ನೂ ಉಪಸ್ಥಿತರಿದ್ದರು.

# ರಕ್ಷಣೆಯ ವೇಳೆ ವಿವಿಧ ಇಲಾಖೆಗಳ ಸಹಕಾರ ಅಗತ್ಯ

## ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ

■ ಹಂಪಿ ಟೈಮ್ಸ್ ಬಳ್ಳಾರಿ

ಅವಘಡ ಸಂಭವಿಸಿದಲ್ಲಿ ರಕ್ಷಣಾ ಕಾರ್ಯ ಕೈಗೊಳ್ಳಲು ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಅಗ್ನಿ ಶಾಮಕ, ಪೊಲೀಸ್, ಆರೋಗ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಹಕಾರ ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ಜಿಲ್ಲಾಡಳಿತ, ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ವತಿಯಿಂದ ಬಳ್ಳಾರಿ–ಹೊಸಪೇಟೆಯ ನೂತನ ಹೆದ್ದಾರಿಯಲ್ಲಿ ಮಂಗಳವಾರ ಏರ್ಪಡಿಸಿದ್ದ ಅನಿಲ ಸೋರಿಕೆ ನಿರ್ವಹಣೆಯ ಅಣಕು ಪ್ರದರ್ಶನದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಹೆದ್ದಾರಿಗಳಲ್ಲಿ ಬೃಹತ್ ವಾಹನಗಳಲ್ಲಿ ಎಲ್‌ಪಿಜಿ ಅನಿಲ ತುಂಬಿಕೊಂಡು ಸಂಚರಿಸುವ ಸಂದರ್ಭದಲ್ಲಿ ಅವಘಡ ಸಂಭವಿಸಿದ ಮಾಹಿತಿ ಬಂದ ತಕ್ಷಣವೇ ವಿವಿಧ ಇಲಾಖೆಗಳ ಜವಾಬ್ದಾರಿಯುತವಾಗಿ ಕಾರ್ಯ ಪ್ರವೃತ್ತರಾಗಬೇಕಿದೆ ಎಂದರು.

ಅನಿಲ ಸೋರಿಕೆ ನಿರ್ವಹಣೆ ಕುರಿತು ಅಣುಕು ಪ್ರದರ್ಶನದಿಂದ ಸಂಬಂಧಿಸಿದ ವಿವಿಧ ಇಲಾಖೆಗಳು ಬಲಗೊಂಡಿದ್ದು, ಘಟನೆ ಸಂಭವಿಸಿದ್ದಲ್ಲಿ ರಕ್ಷಣೆ ಕಾರ್ಯ ಕೈಗೊಳ್ಳಲು ಸಕಲ ರೀತಿ ಸಿದ್ಧತೆಗೊಳಿಸಲಾಗಿದೆ ಎಂದರು.

ಎನ್‌ಡಿಆರ್‌ಎಫ್‌ನ ಚೀಫ್ ಕಮಾಂಡೆಂಟ್ ಅಖಿಲೇಶ್ ಕುಮಾರ್ ಚೂಬೆ ಅವರು ಮಾತನಾಡಿ, ಎಲ್ಲಾ ರೀತಿಯ ಸಹಕಾರ ನೀಡಿದ ಜಿಲ್ಲಾಡಳಿತಕ್ಕೆ ಅಭಿನಂಧಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಎನ್‌ಡಿಆರ್‌ಎಫ್ ತಂಡದ ಅಧಿಕಾರಿಗಳು, ಸಿಬ್ಬಂದಿ ಸೇರಿದಂತೆ ಅಗ್ನಿ ಶಾಮಕ ಇಲಾಖೆ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

## ಹೆಸರು ಬದಲಾವಣೆ

**ನಾನು ಮಾಬಾಷ ತಂದೆ :ಬಾಬಸಾಬ್, ವಯಸ್ಸು 42 ವರ್ಷ, 21ನೇ ವಾರ್ಡ್, ಮಠಪತಿ ಓಣಿ, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ–583201**

ನನ್ನ ಮಗನಾದ ಶೇಕ್ ರಿಹಾನ್ ಜನನ ಪ್ರಮಾಣ ಪತ್ರದಲ್ಲಿ ಮಗುವಿನ ಹೆಸರು ಮಾಬುಸಾಬ್ ಎಂದು ತಪ್ಪಾಗಿ ನಮೂದಾಗಿದೆ. ಮಗುವಿನ ಹೆಸರು ಮಾಬುಸಾಬ್ ಬದಲಿಗೆ **ಶೇಕ್ ರಿಹಾನ್ (SHAIK RIHAN)**, ತಾಯಿ ಹೆಸರು ಫಾತೀಮಾ ಬದಲಾಗಿ **ಶೇಕ್ ಫಾತಿಮಾ (SHAIK FATIMA)**, ತಂದೆಯ ಹೆಸರು ಮಾಬಾಷ ಬದಲಿಗೆ **ಶೇಕ್ ಮಹಬಾಷ (SHAIK MAHABASHA)**, ಎಂದು ನಮೂದಿಸ ನೀಡಬೇಕೆಂದು ದಿನಾಂಕ 10–09–2024 ರಂದು ನೋಟರಿ ಚಂದ್ರಶೇಖರ ಪಿ.ಯಲಗೋಡ ಹೊಸಪೇಟೆ ಇವರ ಮೂಲಕ ಪ್ರಮಾಣೀಕರಿಸುತ್ತೇನೆ

# ಅರ್ಹ ಕಡು ಬಡವರಿಗೆ 917 ಮನೆಗಳು ಪೂರ್ಣಗೊಳಿಸಲು ದೀಪಾವಳಿ ಗಡುವು

## ಜಿಲ್ಲೆಗೆ ಅನುಮೋದನೆಗೊಂಡ 6420 ಫಲಾನುಭವಿ ಉಳಿದ 386 ಫಲಾನುಭವಿ ಆಧಾರ್ ಜೋಡಣೆ



■ ಹಂಪಿ ಟೈಮ್ಸ್ ಹೊಸಪೇಟೆ

ಅರ್ಹ ಕಡು ಬಡವರಿಗೆ ಸೂರು ಕಲ್ಪಿಸುವುದು ಪುಣ್ಯದ ಕಾರ್ಯವಾಗಿದ್ದು, ಕಟ್ಟಡ ನಿರ್ಮಾಣದ ವಿವಿಧ ಹಂತದಲ್ಲಿರುವ ಜಿಯೋಟ್ಯಾಗ್ ಮಾಡಲಾದ 917 ಮನೆಗಳನ್ನು ಪೂರ್ಣಗೊಳಿಸಿ ಬರುವ ದೀಪಾವಳಿಗೆ ಫಲಾನುಭವಿಗಳಿಗೆ ನೀಡುವಂತೆ ಕ್ರಮವಹಿಸಬೇಕು ಎಂದು ಬಳ್ಳಾರಿ ಲೋಕಸಭಾ ಕ್ಷೇತ್ರದ ಸದಸ್ಯ ಈ ತುಕಾರಾಮ್ ಹೊಸಪೇಟೆ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಿಗೆ ಗಡುವು ವಿದಿಸಿದರು.

ಜಿಲ್ಲಾಡಳಿತ ಭವನದಲ್ಲಿನ ಆಡಿಟೋರಿಯಂ ಹಾಲನಲ್ಲಿ ಸೆಪ್ಟೆಂಬರ್ 10ರಂದು ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಮನೆಗಳ ಪ್ರಗತಿಯನ್ನು ಪೂರ್ಣಗೊಳಿಸುವಲ್ಲಿ ಚುರುಕಾಗಿ ಕೆಲಸ ನಿರ್ವಹಿಸಬೇಕು. ವಿಜಯನಗರ ಜಿಲ್ಲೆಗೆ ಅನುಮೋದನೆಗೊಂಡ 6420 ಫಲಾನುಭವಿಗಳ ಪೈಕಿ ಬಾಕಿ ಉಳಿದ 386 ಫಲಾನುಭವಿಗಳ ಆಧಾರ್ ಜೋಡಣೆಯನ್ನು ಪೂರ್ಣಗೊಳಿಸಬೇಕು. ಮನೆಗಳು ಪ್ರಾರಂಭವಾಗದೇ ಇದ್ದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಇದನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ಮನೆ ಪ್ರಾರಂಭಿಸಲು ಕ್ರಮ ವಹಿಸಬೇಕು ಎಂದು ಸಂಸದರು ಸೂಚನೆ ನೀಡಿದರು.

ಅಂಗನವಾಡಿಗಳಿಗೆ ಪೌಷ್ಠಿಕ ಆಹಾರ ಪೂರೈಕೆಯಾಗಬೇಕು. ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ನೇಮಕಾತಿಯನ್ನು ಪಾರದರ್ಶಕವಾಗಿ ನಡೆಸಬೇಕು. ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಅವಶ್ಯವಿರುವ ನಿವೇಶನಗಳ ಬೇಡಿಕೆಯನ್ನು ತಾಲೂಕುವಾರು ಪಟ್ಟಿ ಮಾಡಿ ಆಯಾ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳಿಗೆ ಸಲ್ಲಿಸಿ ಸಮನ್ವಯ ಮಾಡಬೇಕು ಎಂದು ಸಂಸದರು ಸೂಚನೆ ನೀಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳೊಂದಿಗೆ ಪ್ರತ್ಯೇಕವಾಗಿ ಸಭೆ ನಡೆಸಿ ಪ್ರಗತಿ ಪರಿಶೀಲನೆ ನಡೆಸಬೇಕು ಎಂದು ಸಂಸದರು ಜಿಲ್ಲಾ ಪಂಚಾಯತ್ ಸಿಇಓ ಅವರಿಗೆ ಸೂಚನೆ ನೀಡಿದರು.

ಡೈರಿ ನಿರ್ವಹಣೆಗೆ ಸೂಚನೆ: ಪ್ರತಿನಿತ್ಯ ದಿನಚರಿ ನಿರ್ವಹಣೆ ಮಾಡುತ್ತೀರಾ ಎಂದು ಸಂಸದರು ಅಧಿಕಾರಿಗಳಿಗೆ ಕೇಳಿದರು. ಇಲಾಖೆಗಳಿಂದ ಡೈರಿ ಒದಗಿಸಿಲ್ವಾ ಎಂದು ಪ್ರಶ್ನಿಸಿದರು. ಸಭೆಗೆ ಸರಿಯಾಗಿ ಮಾಹಿತಿ ನೀಡದ, ಪ್ರತಿ ನಿತ್ಯ ಡೈರಿ ಬಳಸದ ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ತಾವು ನೇರವಾಗಿ ಆಯಾ ಇಲಾಖೆಗಳ ಕಾರ್ಯದರ್ಶಿಗಳಿಗೆ ಪತ್ರ ಬರೆಯುವುದಾಗಿ ಎಚ್ಚರಿಕೆ ನೀಡಿದರು.

ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆ, ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಸೇರಿದಂತೆ ಕೇಂದ್ರ ಪುರಸ್ಕೃತ ವಿವಿಧ ಯೋಜನೆಗಳ ಬಗ್ಗೆ ಈ ಹಿಂದೆ ನಡೆದ ಸಭೆಯ ಅನುಪಾಲನಾ ವರದಿಯ ಮೇಲೆ ಸಂಸದರು ಚರ್ಚಿಸಿದರು.

ಸಭೆಯಲ್ಲಿ ಶಾಸಕ ಎಂ.ಪಿ.ಲತಾ ಮಲ್ಲಿಕಾರ್ಜುನ, ಡಾ.ಎನ್.ಟಿ.ಶ್ರೀನಿವಾಸ, ಎಲ್.ಕೃಷ್ಣ ನಾಯ್ಕ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವ ಹಣಾಧಿಕಾರಿ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ ಷಾಹ, ಅಪರ ಜಿಲ್ಲಾಧಿಕಾರಿ ಇ ಬಾಲಕೃಷ್ಣಪ್ಪ, ಸಹಾಯಕ ಆಯುಕ್ತರಾದ ವಿವೇಕಾನಂದ ಪಿ., ಚಿದಾನಂದ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಮತ್ತು ತಹಸೀಲ್ದಾರರು ತಾಲೂಕು ಪಂಚಾಯತ್ ಕಾರ್ಯನಿರ್ವ ಹಣಾಧಿಕಾರಿಗಳು ಇದ್ದರು.

# ಮನದ ಭಯ ಹೋಗಲಾಡಿಸಿ ಮಾನಸಿಕವಾಗಿ ಸದೃಢರಾಗಿ

**ಮೂರನೆ ಪುಟದಿಂದ**

ಭಾವಾನಾತ್ಮಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು ಜೀವನ ನಡೆಸಬೇಕು ಅಥವಾ ರಾಷ್ಟ್ರೀಯ ಟೆಲಿ–ಮಾನಸಿಕ ಆರೋಗ್ಯ ಕಾರ್ಯಕ್ರಮದ ಟೆಲಿ ಮನಸ್‌ನ ಉಚಿತ ಸಹಾಯವಾಣಿ 14416 ಗೆ ಕರೆಮಾಡಿ 24/7 ಸಮಯದಲ್ಲಿ ನಿಮ್ಮ ವ್ಯಯಕ್ತಿಕ ಸಮಸ್ಯೆ ಹಾಗೂ ಮಾನಸಿಕ ಖಿನ್ನತೆಗಳಿದ್ದಲ್ಲಿ ತಜ್ಞರ ಸಲಹೆ ಪಡೆದುಕೊಳ್ಳಿ ಎಂದರು.

ಈ ವೇಳೆ ಆತ್ಮಹತ್ಯೆಗೆ ಕಾರಣ ಖಿನ್ನತೆ ಹಾಗೂ ಟೆಲಿ ಮನಸ್‌ನ ಕರಪತ್ರ ಬಿಡುಗಡೆಗೊಳಿಸಲಾಯಿತು. ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನ ಅಂಗವಾಗಿ ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಲಾಯಿತು.

ಕೌಲ್‌ಬಜಾರ್ ಪೊಲೀಸ್ ಠಾಣೆಯ ಪಿಐ ಟಿ.ಸುಭಾಷ್ ಚಂದ್ರ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ.ಪೂರ್ಣಿಮಾ ಕಟ್ಟಿಮನಿ, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ.ಮರಿಯಂಬಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ್ ಹೆಚ್.ದಾಸಪ್ಪನವರ, ಭಾರತೀಯ ವೈದ್ಯ ಸಂಘದ ಅಧ್ಯಕ್ಷ ಶ್ರೀನಿವಾಸುಲು, ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ.ಅರವಿಂದ ಪಾಟೀಲ್, ಹಾನಗಲ್ ಶ್ರೀ ಕುಮಾರೇಶ್ವರ ಪಾಲಿಟೆಕ್ನಿಕ್‌ನ ಅಧ್ಯಕ್ಷ ಪಲ್ಲೇದ ಪ್ರಭುಲಿಂಗ, ಪ್ರಾಂಶುಪಾಲ ಶ್ರೀಶೈಲ ಗೌಡ ಬಾಣಾಪುರ ಸೇರಿದಂತೆ ಆರೋಗ್ಯ ಇಲಾಖೆಯ ಸಿಬ್ಬಂದಿ, ಉಪನ್ಯಾಸಕರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

HAMPI TIMES VIJAYANAGARA

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

### ನಿರ್ದೇಶಾಂಕ ರೇಖಾಗಣಿತ

x ಅಕ್ಷದಿಂದ (–8,3) ಬಿಂದುಗಿರುವ ದೂರವನ್ನು ಕಂಡುಹಿಡಿಯಿರಿ.(ಏಪ್ರಿಲ್ 2023)

ಉತ್ತರ : 3

1) x ಅಕ್ಷದಿಂದ (4,3) ಬಿಂದುಗಿರುವ ದೂರವನ್ನು ಕಂಡುಹಿಡಿಯಿರಿ.

2) y ಅಕ್ಷದಿಂದ (5,7) ಬಿಂದುಗಿರುವ ದೂರವನ್ನು ಕಂಡುಹಿಡಿಯಿರಿ

**ಮೂಲ ಬಿಂದುವಿನಿಂದ ಇರುವ ದೂರ** $d = \sqrt{x^2 + y^2}$

1) ಮೂಲಬಿಂದು ಮತ್ತು (3,4) ಬಿಂದುಗಳ ನಡುವಿನ ದೂರವನ್ನು ಕಂಡುಹಿಡಿಯಿರಿ.

$x = 3, \quad y = 4$
$d=\sqrt{x^2 + y^2}$
$d=\sqrt{3^2 + 4^2}$
$d=\sqrt{9 + 16}$
$d=\sqrt{25}$
$d = 5$ ಮಾನಗಳು

2) ಮೂಲಬಿಂದು ಮತ್ತು (7,3) ಬಿಂದುಗಳ ನಡುವಿನ ದೂರವನ್ನು ಕಂಡುಹಿಡಿಯಿರಿ.

3) ಮೂಲಬಿಂದುವಿನಿಂದ (4,3) ಬಿಂದುವಿಗೆ ಇರುವ ದೂರವನ್ನು ಕಂಡುಹಿಡಿಯಿರಿ.

**ದೂರ ಸೂತ್ರ**

$(x_1, x_2)$ ಮತ್ತು $(y_1, y_2)$ ಬಿಂದುಗಳಿಗಿರುವ ದೂರವನ್ನು ಕಂಡುಹಿಡಿಯಿರಿ. (ಏಪ್ರಿಲ್ 2021)

$d = \sqrt{(x_2 - x_1)^2 + (y_2 - y_1)^2}$

1) (5,3) ಮತ್ತು (1,2) ಬಿಂದುಗಳ ನಡುವಿನ ದೂರವನ್ನು ಕಂಡುಹಿಡಿಯಿರಿ.

$x_1=5, \quad x_2=1, \quad y_1=3, \quad y_2=2$
$d=\sqrt{(x_2 - x_1)^2 + (y_2 - y_1)^2}$
$d=\sqrt{(1 - 5)^2 + (2 - 3)^2}$
$d=\sqrt{(-4)^2 + (-1)^2}$
$d= \sqrt{16 + 1}$
$d= \sqrt{17}$ ಮಾನಗಳು

2) (2,6) ಮತ್ತು (5,10) ಬಿಂದುಗಳ ನಡುವಿನ ದೂರವನ್ನು ಕಂಡುಹಿಡಿಯಿರಿ.

3) (5,7) ಮತ್ತು (12, –3) ಬಿಂದುಗಳ ನಡುವಿನ ದೂರವನ್ನು ಕಂಡುಹಿಡಿಯಿರಿ.

4) (–5,7) ಮತ್ತು (–1, 3) ಬಿಂದುಗಳ ನಡುವಿನ ದೂರವನ್ನು ಕಂಡುಹಿಡಿಯಿರಿ.(ಏಪ್ರಿಲ್ 2020)

**ಭಾಗ ಪ್ರಮಾಣ ಸೂತ್ರ**

$$P(x, y) = \left(\frac{m_1x_2+m_2x_1}{m_1+m_2}, \frac{m_1y_2+m_2y_1}{m_1+m_2}\right)$$

1) (4,-3) ಮತ್ತು (8, 5) ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು ಆಂತರಿಕವಾಗಿ 3 : 1 ರ ಅನುಪಾತದಲ್ಲಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

$x_1=4, \quad x_2=8, \quad y_1=-3, \quad y_2=5, \quad m_1=3, m_2=1$
$P(x, y) = \left(\frac{m_1x_2+m_2x_1}{m_1+m_2}, \frac{m_1y_2+m_2y_1}{m_1+m_2}\right)$
$p(x ,y) = \left(\frac{3(8)+1(4)}{3+1}, \frac{3(5)+1(-3)}{3+1}\right)$
$p(x ,y) = \left(\frac{24+4}{4}, \frac{15-3}{4}\right)$
$p(x ,y) = \left(\frac{28}{4}, \frac{12}{4}\right)$
$p(x,y) = (7,4)$

2) (-1, 7) ಮತ್ತು (4, -3) ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು ಆಂತರಿಕವಾಗಿ 2 : 3 ರ ಅನುಪಾತದಲ್ಲಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ. (ಮಾರ್ಚ್ 2022)

ಮುಂದುವರೆಯುವುದು...

ಮಾರ್ಗದರ್ಶಿ ಶಿಕ್ಷಕರು : **ಎಂ.ಎಸ್.ಮಂಜುನಾಥ,** ಶಿಕ್ಷಕರು, ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055